

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 324 Wednesday 15-05-2024 E-mail : maruti.b.hosamani76@gmail.com Page: 4 Price : Rs. 1/-


## ಎಸ್.ಎನ್. ನಿಶಾ ಯು.ಪಿ.ಎಸ್.ಸಿ ಪರೀಕ್ಷೆಯಲ್ಲಿ ಸಾಧನೆ ಜಿಲ್ಲೆಗೆ ಪ್ರಥಮ–ಸಂತಸ ವ್ಯಕ್ತಪಡಿಸಿದ ಕುಟುಂಬಸ್ಥರು

**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ, ಕೇಂದ್ರ ಲೋಕ ಸೇವಾ ಆಯೋಗ(ಯುಪಿಎಸ್ ಸಿ) ನಡೆಸಿದ ಭಾರತೀಯ ಅರಣ್ಯ ಸೇವೆ (IFS) ಪರೀಕ್ಷೆಯಲ್ಲಿ ಪಟ್ಟಣದ ಎಸ್.ಎನ್.ನಿಶಾ 90 ನೇ. ರ್ಯಾಂಕ್ ಪಡೆದಿದ್ದಾರೆ. ಪಟ್ಟಣದ ನಿವಾಸಿಯಾಗಿರುವ ನಿಶಾ 4 ನೇ. ಪ್ರಯತ್ನದಲ್ಲಿ ಈ ಸಾಧನೆ ಮಾಡಿದ್ದಾರೆ. ಪ್ರಸಕ್ತ ವರ್ಷದಲ್ಲಿ ಯು.ಪಿ.ಎಸ್.ಸಿ ನಡೆಸಿದ ಐಎಫ್‌ಎಸ್ ಪರೀಕ್ಷೆಯಲ್ಲಿ 147 ವಿಧ್ಯಾರ್ಥಿಗಳಲ್ಲಿ ನಾನು 90 ನೇ. ರ್ಯಾಂಕ್ ಪಡೆದಿದ್ದಾಳೆ. ಕರ್ನಾಟಕ ರಾಜ್ಯ ದಿಂದ 11 ಜನ ಮಾತ್ರ ಐಎಫ್‌ಎಸ್ ಗೆ ಆಯ್ಕೆಯಾಗಿದ್ದು ಅದರಲ್ಲಿ ನಾನು ಒಬ್ಬಳಾಗಿರುವುದು ನನಗೆ ತುಂಬಾ ಸಂತೋಷ ವಾಗುತ್ತದೆ ಎಂದು ಹೇಳುತ್ತಾರೆ. ನಿಶಾ. ಆರಂಭದಿಂದ ಪಿಯುಸಿ ವರೆಗೂ ಕೂಡ್ಲಿಗಿ ಯಲ್ಲಿಯೇ ವಿಧ್ಯಾಭ್ಯಾಸ ಮಾಡಿರುವ ನಿಶಾ, ಈ ಮೊದಲು ಎಂಬಿಬಿಎಸ್ ಮಾಡುವ ಕನಸು ಹೊಂದಿದ್ದರು. ಆದರೆ ನಿರೀಕ್ಷಿತ ಅಂಕಗಳಿಸದೇ ಒಲ್ಲದ ಮನಸ್ಸಿನಿಂದ ಬಿಎಸ್ಸಿ ಫಾರೆಸ್ಟರಿ ಆಯ್ಕೆ ಮಾಡಿಕೊಂಡು ಇದನ್ನೇ ಮುಂದಿನ ವಿದ್ಯಾಭ್ಯಾಸ



ಮಾಡಲು ನನಗೆ ತುಂಬಾ ಇಷ್ಟ ಇತ್ತು ಅಲ್ಲಿಂದ ನಾನು ಸಾಮಾನ್ಯ ಜ್ಞಾನ (ಜಿಕೆ) ಕಡೆ ಹೆಚ್ಚಿನ ಅಭ್ಯಾಸ ಮಾಡುವ ಆಲೋಚನೆ ಮಾಡಿ ಪುಸ್ತಕಗಳನ್ನು ಓದಿದೆ. ಬಿಎಸ್ಸಿ ಕೊನೆಯ ವರ್ಷದಲ್ಲಿಯೇ ಯುಪಿಎಸ್ ಸಿ ಪರೀಕ್ಷೆಯಲ್ಲಿ ಸಾಮಾನ್ಯ ಜ್ಞಾನಕ್ಕೆ ಆರಂಭದಲ್ಲಿ ಬೇಕಾದ ತಯಾರಿಗೆ ನಾನು ಮಾನಸಿಕವಾಗಿ ಸಿದ್ಧಳಾದೆ. ನಂತರ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಉಚಿತ ಕೋಚಿಂಗ್ ಪರೀಕ್ಷೆ ಇತ್ತು ಅದರಲ್ಲಿ ನಾನು ಪರೀಕ್ಷೆ ಬರೆದು ಅರ್ಹತೆ ಹೊಂದಿದೆ. ನಂತರ ಶಂಕರ್ ಐಎಎಸ್ ಕೋಚಿಂಗ್ ಸೆಂಟರ್ ನಲ್ಲಿ ಯುಪಿಎಸ್ ಸಿ ಕೊಚಿಂಗ್ ತೆಗೆದು–ಕೊಂಡೆ, ಮೊದಲ ಪ್ರಯತ್ನದಲ್ಲಿ ಅಷ್ಟಾಗಿ ತಯಾರಿ ಇರಲಿಲ್ಲ ಆದರೂ ಕೋವಿಡ್ ನಿಂದಾಗಿ ಸ್ವಲ್ಪ ಹಿನ್ನಡೆಯಾಯಿತು. ಎರಡನೆ ಪ್ರಯತ್ನದಲ್ಲಿ ಜಿಕೆ ಮತ್ತು ಸಿಸ್ಯಾಟ್ ಪರೀಕ್ಷೆಗಳಲ್ಲಿ ಸಿಸ್ಯಾಟ್ ನಲ್ಲಿ 66 ಅಂಕಗಳನ್ನು ಪಡೆಯಬೇಕಿತ್ತು ಅದರಲ್ಲಿ ಹಿನ್ನಡೆಯಾಗಿತ್ತು. ಛಲ ಬಿಡದೇ 3 ನೇ. ಬಾರಿ ಪ್ರಯತ್ನ ಮಾಡಿದೆ ಅಲ್ಲಿ ಸಂದರ್ಶನದವರೆಗೂ ಹೋಗಲು ಮಾತ್ರ ಸಾಧ್ಯವಾಯಿತು. ಅದರೂ ಮನೆಯವರ ಬೆಂಬಲ ಮತ್ತು ಪ್ರೋತ್ಸಾಹ ಹಾಗೂ ನನ್ನ ಅಚಲ ಗುರಿ ಮಾತ್ರ ನಾನು ಬಿಡಲಿಲ್ಲ ನಾಲ್ಕನೇ ಭಾರಿ ಕಠಿಣ ಅಭ್ಯಾಸ ಮಾಡಿ ಪರೀಕ್ಷೆ ಎದುರಿಸಿ ಈ ಯಶಸ್ಸನ್ನು ಮುಡಿಗೇರಿಸಿ ಕೊಂಡೆ ಎಂದು ಅತ್ಯಂತ ಭಾವುಕಗಳಾಗಿ ಹೇಳಿದರು. ನನ್ನ ಈ ಸಾಧನೆಗೆ ನನ್ನ ತಂದೆ ದಿವಂಗತ ಡಾ.ಶ್ರೀನಿವಾಸ್ ಅವರೇ ಪ್ರೇರಣೆ ಮತ್ತು ನನ್ನ ಈ ಯಶಸ್ಸಿಗೆ ನನ್ನ ತಾಯಿ ಜಯಮ್ಮ ಹಾಗೂ ದೊಡ್ಡಮ್ಮ ನಾಗಮಣಿ ಜಿಂಕಾಲ್ ಅವರೇ ಕಾರಣ ಆರಂಭದಲ್ಲಿ ಸೋಲು ಕಂಡರು ಯಾವ ಕಾರಣ–ಕ್ಕೂ ಎದೆಗುಂದದೆ ಪರೀ–ಕ್ಷೆ ಎದುರಿಸು ಎಂದು ಬೆಂಬಲ ನೀಡಿದ್ದು ನಾನು ನೆನಯಬೇಕು ಎಂದು ಹೇಳಿದ ನಿಶಾ. ನಾವು ಗ್ರಾಮೀಣ ವಿಧ್ಯಾರ್ಥಿಗಳು ಎಂಬ ಕೀಳರಿಮೆ ಯಾವ ವಿದ್ಯಾರ್ಥಿಗಳು ಹೊಂದ ಬೇಡಿ, ಉನ್ನತ ಗುರಿಯೊಂದಿಗೆ, ಒಬ್ಬ ಗುರುವಿನ ಮಾರ್ಗದರ್ಶನದಲ್ಲಿ ಸತತ ಪ್ರಯತ್ನ, ಹಾಗೂ ಸತತ ಅಭ್ಯಾಸ ಇದ್ದರೆ ಖಂಡಿತವಾಗಿ ಯಶಸ್ಸು ಸಾಧ್ಯ ಎನ್ನುತ್ತಾರೆ ನಿಶಾ. ಆನ್ಲೈನ್ ತರಬೇತಿ ಅವಕಾಶಗಳು ಸಾಕಷ್ಟು ಇವೆ ಅವುಗಳ ಸಹಾಯ ಪಡೆದು ಗ್ರಾಮೀಣ ಪ್ರದೇಶದಲ್ಲಿಯೇ ಓದಿ, ಆದರೆ ಸತತ ಓದು ಹಾಗೂ ಪತ್ರಿಕೆಗಳನ್ನು ಹೆಚ್ಚಾಗಿ ಓದಿದರೆ ನಿಮಗೆ ಉನ್ನತ ಗುರಿ ಮುಟ್ಟಲು ಸಾಧ್ಯ ಎನ್ನುತ್ತಾರೆ.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರಾಘವೇಂದ್ರ. ಬಿ.ಸಾಲುಮನೆ. ಕೂಡ್ಲಿಗಿ**

## ರಕ್ತದ ದಾನ ಶ್ರೇಷ್ಠ ದಾನ–ಶಿವಪುತ್ರ ಶ್ರೀಗಳು

**ಇಂಡಿ** : ರಕ್ತ ದಾನ ಶ್ರೇಷ್ಠ ದಾನ. ಅದರಲ್ಲಿ ಯುವ ಜನತೆಯ ಪಾತ್ರ ಹೆಚ್ಚಿದೆ. ಇಂದು ಎಲ್ಲೆಡೆ ರಕ್ತದ ಅಗತ್ಯತೆ ಹೆಚ್ಚಿದೆ. ಆದ್ದರಿಂದ ರಕ್ತದಾನಿಗಳ ಅಗತ್ಯವು ಹೆಚ್ಚಿದೆ ಎಂದು ರೋಡಗಿಯ ಅಭಿನವ ಶಿವಪುತ್ರ ಸ್ವಾಮಿಗಳು ಹೇಳಿದರು.

ಇಂಡಿ ತಾಲೂಕಿನ ರೋಡಗಿ ಗ್ರಾಮದಲ್ಲಿ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವದ ನಿಮಿತ್ಯ ಶಿವಲಿಂಗೇಶ್ವರ ಸ್ವಾಮಿಗಳ 13 ನೇ. ವರ್ಷದ ಪಟ್ಟಾಧಿಕಾರ ಮಹೋತ್ಸವ ಅಂಗವಾಗಿ ನಡೆದ ಉಚಿತ ಆರೋಗ್ಯ ತಪಾಸಣೆ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ ಮತ್ತು ಬೃಹತ್ ರಕ್ತದಾನ ಶಿಬಿರದಲ್ಲಿ ಮಾತನಾಡಿ, ಅಪಘಾತಕ್ಕೀಡಾದವರಿಗೆ ಮತ್ತು ಹೆರಿಗೆ ಸಂದರ್ಭದಲ್ಲಿ ರಕ್ತದ ಕೊರತೆ ಯಿಂದ ಹೋಗುವ ಜೀವಗಳನ್ನ ಉಳಿಸಲು ರಕ್ತದಾನ ಮಾಡುವದು ಅತಿ ಅವಶ್ಯ ಎಂದರು.

ಗೋಳಸಾರದ ಅಭಿನವ ಪುಂಡಲಿಂಗ ಶಿವಯೋಗಿಗಳು ಸಾನ್ನಿಧ್ಯ ವಹಿಸಿದ್ದರು. 450 ಜನರಿಗೆ ನೇತ್ರ ತಪಾಸಣೆ, 25 ಜನರಿಗೆ ಶಸ್ತ್ರ ಚಿಕಿತ್ಸೆ,12 ಜನರಿಗೆ ಕಣ್ಣು ಪೊರೆ ತೆಗೆಯುವುದು ಸೇರಿದಂತೆ 32 ಜನ ರಕ್ತದಾನ ಮಾಡಿದರು.



ಈ ಶಿಬಿರದಲ್ಲಿ ಡಾ. ಅನೀಲ ರಾಠೋಡ, ಸಂಗಮೇಶ ಕಡಿಬಾಗ, ಆರೀಫ್ ಇನಾಮದಾರ, ಅರುಣ ಕಾಂಬಳೆ, ಪ್ರಕಾಶ ಕವಲಗಿ, ರುದ್ರಗೌಡ ಅಲಬಗೊಂಡ, ಪ್ರಶಾಂತ ಅಲಗೊಂಡ, ಶಂಕರಗೌಡ ಬಂಡಿ, ಸಂತೋಷ ಪಾಟೀಲ ಮತ್ತಿತರಿದ್ದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಶಿವಪ್ಪ.ಬಿ.ಹರಿಜನ. ಇಂಡಿ.**

## ಅಧ್ಯಕ್ಷರಾಗಿ ಶಿವಾನಂದ ಉಪಾಧ್ಯಕ್ಷರಾಗಿ ಅನ್ನಪೂರ್ಣ ಆಯ್ಕೆ

**ಹುನಗುಂದ :** ಪಟ್ಟಣದ ಶ್ರೀ ವಿಜಯ ಮಹಾಂತೇಶ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಶಿವಾನಂದ ಕಂಠಿ ಹಾಗೂ ಉಪಾಧ್ಯಕ್ಷರಾಗಿ ಅನ್ನಪೂರ್ಣ ಹೊಸೂರ ಆಯ್ಕೆಯಾಗಿದ್ದಾರೆ.

ಶ್ರೀ ವಿಜಯ ಮಹಾಂತೇಶ ಬ್ಯಾಂಕ್ ನೂತನ ಅಧ್ಯಕ್ಷ ಮಾತನಾಡಿ ಪ್ರತಿಷ್ಠಿತ ಬ್ಯಾಂಕಿನ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಶ್ರೇಯೋಭಿವೃದ್ಧಿಯಶ್ರಮಿಸುವೆಎಂದರು.ಉಪಾಧ್ಯಕ್ಷರಾಗಿಅನ್ನಪೂರ್ಣ ಹೊಸೂರು ಮಾತನಾಡಿ ನನ್ನ ಮೇಲೆ ಭರವಸೆಯಿಟ್ಟು ಆಯ್ಕೆ ಮಾಡಿದ್ದಕ್ಕೆ ನಿಮ್ಮೆಲ್ಲರೊಂದಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಶ್ರೀವಿಜಯ ಮಹಾಂತೇಶ ಬ್ಯಾಂಕಿನ ಮಾಜಿ ಅಧ್ಯಕ್ಷ ರವಿ ಹುಚ್ಚುನೂರ ಮಾತನಾಡಿ ಹತ್ತು ತಿಂಗಳ ಕಾಲ ನನ್ನನ್ನು ವಿಜಯ ಮಹಾಂತೇಶ ಬ್ಯಾಂಕಿನ ಅಧ್ಯಕ್ಷನಾಗಿ ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸವನ್ನು ಎಲ್ಲಾ ನಮ್ಮ ಬ್ಯಾಂಕಿನ ಸದಸ್ಯರಿಗೂ ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಧನ್ಯವಾದಗಳು ಹೇಳಲು ಬಯಸುತ್ತೇನೆ ಎಂದರು. ಈ ಸಂದರ್ಭದಲ್ಲಿ ಶಶಿಕಾಂಗೌಡ ಪಾಟೀಲ ಮಹಾಂತೇಶ ಆವರಿ ಬಸವರಾಜ ಗದ್ದಿ ರಾಜಕುಮಾರ ಬಾಗವಾಡಗಿ ಸೋಮಶೇಖರ ಬಲಕುಂದಿ ಸಂಗಣ್ಣ ಕಡಪಟ್ಟಿ ನೀಲಪ್ಪ ತಪ್ಪೆಲಿ ದೇವು ಡಂಬಳ ಬಸವರಾಜ ನಾಡಗೌಡರ ತಿರುಪತಿ ಕುಷ್ಟಗಿ



ಮಂಜು ಆಲೂರ ಶಕುಂತಲಾ ಗಂಜಿಹಾಳ ಲಕ್ಷ್ಮೀಬಾಯಿ ಮುಕ್ಕಣ್ಣವರ್ ಸುಜಾತ ನಾಗರಾಳ ಸುರೇಶ್ ಚಿತ್ತರಗಿ ಪ್ರಧಾನ ವ್ಯವಸ್ಥಾಪಕರು ಕೆ ಎಸ್ ಅಲದಿ ಸಿಬ್ಬಂದಿಗಳಾದ ರಾಜು ಬಯ್ಯಾಪುರ ಪ್ರಕಾಶ್ ಪಾಟೀಲ್ ಗಿರೀಶ ಪಾಟೀಲ್ ಆರ್ ವಿ ಪಾಟೀಲ ಮುಖಂಡರಾದ ಎಸ್ ಬಿ ಗಂಜಿಹಾಳ ಶರಣಪ್ಪ ಹೊಸೂರ ಶೇಖರಪ್ಪ ಬಾದವಾಡಗಿ ಅನೇಕರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮಲ್ಲಿಕಾರ್ಜುನ.ಎಂ.ಬಂಡರಗಲ್ಲ ಹುನಗುಂದ**

## ಕೆರೆ ಅಭಿವೃದ್ಧಿ ಪಡಿಸಿ, ಇಲಾಖೆಯ ಸುಪರ್ದಿಗೆ ಪಡೆದು ನೀರು ತುಂಬಿಸುವಂತೆ ಆಗ್ರಹ ಆಸ್ಕಿ, ಬೆಕಿನಾಳ, ಬೂದಿಹಾಳ ಪಿ.ಟಿ, ಹುಣಶ್ಯಾಳ ಕೆರೆ ತುಂಬಿಸುವಂತೆ ಆಗ್ರಹ

**ತಾಳಿಕೋಟೆ** : ಆಸ್ಕಿ, ಬೂದಿಹಾಳ.ಪಿ.ಟಿ, ಬೆಕಿನಾಳ ಹಾಗೂ ಹುಣಶ್ಯಾಳ ಗ್ರಾಮದ ಕೆರೆಯ ವ್ಯಾಪ್ತಿಯ ಜಮೀನ್ನನ್ನು ಇಲಾಖೆಯ ಸುಪರ್ದಿಗೆ ತೆಗೆದು–ಕೊಂಡು ಅದನ್ನು ಅಭಿವೃದ್ಧಿ ಪಡಿಸಿ ಕೆರೆ ನೀರು ತುಂಬಿಸಬೇಕು ಮತ್ತು ರೈತರ ಉತಾರೆಯಲ್ಲಿ ಜಮೀನನ್ನು ಕಡಿಮೆ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ತಾಳಿಕೋಟಿ ತಾಲೂಕಾ ತಹಶಿಲ್ದಾರರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತಾ ವಿಜಯಪುರ ಜಿಲ್ಲೆಯ ತಾಳಿಕೋಟಿ ತಾಲೂಕಿನ ಆಸ್ಕಿ, ಬೂದಿಹಾಳ.ಪಿ.ಟಿ, ಹುಣಶ್ಯಾಳ ಹಾಗೂ ಬೆಕಿನಾಳ ಗ್ರಾಮದಲ್ಲಿಯ ಕೆರೆಗಳು ಇಂದು ಅಕ್ಕಪಕ್ಕದ ರೈತರು ಅತಿಕ್ರಮಣ ಮಾಡಿಕೊಂಡು ಸಾರ್ವಜನಿಕರಿಗೆ



ಹಾಗೂ ಜನಜಾನುವಾರುಗಳಿಗೆ ಅಲ್ಲಿ ನೀರು ಕುಡಿಯಲು ಹಾಗೂ ಬಳಸಲು ಬಿಡುತ್ತಿಲ್ಲ, ಕೇಳಿದರೆ ಇದು ನಮ್ಮ ಜಾಗ ನಮ್ಮ ಹೆಸರಲ್ಲಿ ಉತ್ತಾರೆಗಳಿವೆ ಎಂದು ದೊಡ್ಡ ಧ್ವನಿಯಲ್ಲಿ ಅಂಜಿಸುತ್ತಿದ್ದಾರೆ.

ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸ್ಥಳ ವಿಕ್ಷಣೆ ಮಾಡಿ ಕೆರೆಯ ಒಟ್ಟು ಅಳತೆ ಮಾಡಿ ಅಕ್ರಮವಾಗಿ ಅತೀಕ್ರಮಣ ಮಾಡಿ ಸಾಗುವಳಿ ಮಾಡುತ್ತಿರುವವರನ್ನು ಅಲ್ಲಿಂದ ಖಾಲಿ ಮಾಡಿಸಿ, ಅಂತವರ ಮೇಲೆ ಕಾನೂನು ಕ್ರಮ ಕೈಕೊಳ್ಳಬೇಕು, ಸಂಪೂರ್ಣ ಕೆರೆಯನ್ನು ಅಭಿವೃದ್ಧಿ ಪಡಿಸಬೇಕು, ಇಗಾಗಲೇ ಬರಗಾಲದಿಂದ ತತ್ತರಿಸಿರುವ ರೈತರಿಗೆ ಕೆರೆಯಿಂದ ಸಾಕಷ್ಟು ಅನುಕೂಲವಾಗಲಿದೆ, ಅಕ್ಕಪಕ್ಕದ ಬಾವಿ, ಕೊಳವೆ ಭಾವಿಯಲ್ಲಿ ನೀರು ಹೆಚ್ಚಾಗಿ ಕೃಷಿ ಮಾಡಲು ಮತ್ತು ಕುಡಿಯಲು ನೀರಿನ ಬಹುದೊಡ್ಡ ಸಹಾಯವಾಗುವುದು. ಆದ್ದ–ರಿಂದ ಈ ಎಲ್ಲಾ ಕೆರೆಯನ್ನು ತುಂಬಿಸಬೇಕು. ಎಂದರು.

ರೈತ ಸಂಘದ ತಾಲೂಕಾ ಅಧ್ಯಕ್ಷರಾದ ಶ್ರೀಶೈಲ ವಾಲಿಕಾರ ಮಾತನಾಡುತ್ತಾ ಬೆಕಿನಾಳ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಸಾಕಷ್ಟು ಇರುವುದರಿಂದ ಈಗಾಗಲೇ ಬೆಕಿನಾಳ ಗ್ರಾಮದ ಸರಕಾರಿ ಜಮೀನಿನಲ್ಲಿ ಶರಣಪ್ಪ ಕಟ್ಟಿಮನಿ ಇವರ ಬಾವಿಯಲ್ಲಿ ಸಾಕಷ್ಟು ನೀರು ಇದ್ದು, ಅಲ್ಲಿಂದ ಪೈಪಲೈನ ಮೂಲಕ ನೀರನ್ನು ಮನೆ ಮನೆಗೆ ಸರಬರಾಜು ಮಾಡಿದರೆ ನೀರಿನ ಸಮಸ್ಯೆ ಬಗೆಹರೆಯಲಿದೆ ಎಂದರು. ಬೆಸಿಗೆಯ ತಾಪಮಾನದಿಂದ ಸಾಕಷ್ಟ ಸಮಸ್ಯೆ ಅನುಭವಿಸುವಂತಾಗಿದೆ, ಈ ವಿಷಯವನ್ನು ಅತೀ ಅವಶ್ಯಕ ಎಂದು ತಿಳಿದು ಶೀಘ್ರದಲ್ಲಿ ಸಂಪೂರ್ಣ ಕೆರೆ ಜಾಗವನ್ನು ಅಭಿವೃದ್ಧಿ ಪಡಿಸಿ ಕೆರೆ ತುಂಬುವ ಯೋಜನೆಯಡಿ ತುಂಬಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಆಗ್ರಹಿಸುತ್ತಾ ಇದ್ದೇವೆ, ಒಂದು ವೇಳೆ ವಿಳಂಭವಾದರೆ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು. ಈ ವೇಳೆ ಕಲಕೇರಿ ಹೊಬಳಿ ಅಧ್ಯಕ್ಷರಾದ ಮಹಿಬೂಬ ಬಾಷಾ ಮನಗೂಳಿ, ಬೆಕಿನಾಳ ಅಧ್ಯಕ್ಷರಾದ ದೇವಿಂದ್ರಪ್ಪಗೌಡ ಪಾಟೀಲ ಸೇರಿದಂತೆ ಇತರರು ಇದ್ದರು.



ಇಂದು ವಿಜಯಪುರ ಜಿಲ್ಲಾ ಜನ ಸಂಪರ್ಕ್ ಕಾರ್ಯಾಲಯದಲ್ಲಿ AICC HUMAN RIGHTS ವತಿಯಿಂದ ಶ್ರೀ ಶಬ್ಬೀರ ಅಹಮದ್ ಡಲಾಯತ ಅವರ ಉಸ್ತುವಾರಿಯಲಿ ಬಸವ ಜಯಂತಿಯನ್ನು ಆಚರಿಸಲಾಯಿತು ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಅಧ್ಯಕ್ಷರಾದ ಶ್ರೀ ಶಬ್ಬೀರ ಅಹಮದ್ ಡಲಾಯತ ಅವರು ,ಸೈಫನ್ಮಲ್ಕ್ ಡಾಂಗೆ, ಉಸಮಾನ ಆಲಗೂರ,ರಾಜೇಶ್ವರಿ ಮಾಗಿ , ಕಾಜಾ ಮಮದಾಪೂರ, ನಾಭಿಸಬ ತಾಂಬೆ, ಮುಸ್ತಕಿಮ ಉಸ್ತಾದ, ರಂಜಿತ ಜಾಧವ, ಭಾಪು ಜಾತಗಾರ, ಸೋಮು ಲೊ–ಖಂಡೆ, ಮೋಸಿನ ಲೋಣಿ,ದತ್ತಾರಾಮ ಹೊನಕೊಳಸೆ,ರಾಶಿದ ಸಿಂದಗಿಕರ ಉಪಸ್ತಿತರಿದ್ದರು. ಈ ಸಂದರ್ಭದಲ್ಲಿ ಶಬ್ಬೀರ್ ಅಹ್ಮದ್ ಅವರು ಕಾಯಕವೇ ಕೈಲಾಸ ವೆಂಬ ಬಸವಣ್ಣನವರ ವಚನದ ಕುರಿತು ಮಾತನಾಡಿದರು ಹಾಗೂ ಉಸ್ಮಾನ್ ಬಾಷಾ ಆಲಗುರ ಅವರು ಬಸವಣ್ಣವರ ಜೀವನ ಚರಿತೆಯ ಕುರಿತಾಗಿ ಮಾತನಾಡಿದರು ಮತ್ತು ರಾಜೇಶ್ವರಿ ಮಾಗಿ ಅವರು ಬಸವಣ್ಣವರ ಕುರಿತಾಗಿ ಮಾತನಾಡಿದರು ಹಾಗೂ ಉಪಸ್ಥಿತ ಇದ್ದ ಎಲ್ಲರು ಬಸವ ಜಯತಿಯ ಶುಭಾಶೇಯನ್ನು ತಿಳಿಸಿದರು.

–ವಾರದಿ ಖುಷ್ಟರ್ ಚೋಪ್ದಾರ್ ಮುದ್ದೇಬಿಹಾಳ

## ಸ್ವಚ್ಛತೆ ಬಗ್ಗೆ ಜಾಗ್ರತೆ ವಹಿಸಿ: ಜಿಪಂ ಸಿಇಒ ಪಾಂಡೆಯ ಸಲಹೆ





**ಕೊಪ್ಪಳ:** ಗ್ರಾಮದಲ್ಲಿ ಪ್ರತಿಯೊಬ್ಬರೂ ಸ್ವಚ್ಛತೆ ಕಾಪಾಡಬೇಕು. ಇದು ಎಲ್ಲರ ಜವಾಬ್ದಾರಿ ಎಂದು ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆಯ ಹೇಳಿದರು.

ತಾಲೂಕಿನ ಹಾಲವರ್ತಿ ಗ್ರಾಪಂ ವ್ಯಾಪ್ತಿಯ ಬೆಳವಿನಾಳ ಗ್ರಾಮದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶ್ರಮದಾನದಲ್ಲಿ ಭಾಗವಹಿಸಿ ಮಾತನಾಡಿದರು.

ಗ್ರಾಮದಲ್ಲಿ ನರೇಗಾದಡಿ ಎಲ್ಲ ಮನೆಗಳಿಗೆ ಇಂಗು ಗುಂಡಿ ನಿರ್ಮಿಸಲಾಗಿದೆ. ಒಣ, ಹಸಿ ಕಸ ಸಂಗ್ರಹಕ್ಕೆ ಬಿಟ್ಟಿ ನೀಡಲಾಗಿದೆ. ಯಾರೂ ರಸ್ತೆಯಲ್ಲಿ ಕಸ ಹಾಕಬಾರದು. ಎಲ್ಲದಂರಲ್ಲಿ ಕಸ ಹಾಕುವುದರಿಂದ ಅನೈರ್ಮಲ್ಯ ಉಂಟಾಗುತ್ತದೆ. ಜನರ ಅನಾರೋಗ್ಯಕ್ಕೆ ದಾ–ರಿಯಾಗುತ್ತದೆ. ಮನೆಯಲ್ಲಿಯೇ ಹಸಿ&ಒಣ ಕಸ ಬೇರ್ಪಡಿಸಬೇಕು. ನಿತ್ಯ ಕಸದ ವಾಹನಕ್ಕೆ ನೀಡಬೇಕು. ಗ್ರಾಪಂನಿಂದ ಕಾಂಪೋಸ್ಟ್ ಪಿಟ್ ನಿರ್ಮಿಸಿಕೊಡಲಾಗುವುದು. ಸಮುದಾಯ ಇಂಗು ಗುಡಿ ನಿರ್ಮಾಣದಲ್ಲಿ ಗ್ರಾಮ ರಾಜ್ಯಕ್ಕೆ ಮಾದರಿಯಾಗಿದೆ. ಅದರಂತೆ ಸ್ವಚ್ಛತೆ ಕಾಪಾಡುವುದರಲ್ಲಿ ಮಾದರಿಯಾಗಲಿ ಎಂದರು.

ಹೂಳು ತೆಗೆದ ಸಿಇಒ: ಗ್ರಾಮದ ಅಂಗನವಾಡಿ ಕೇಂದ್ರದ ಪಕ್ಕದ ಚರಂಡಿಯಲ್ಲಿ ಹೂಳು ತುಂಬಿದ್ದನ್ನು ಕಂಡ ಸಿಇಒ ಸ್ವತಃ ತಾವೇ ಸ್ವಚ್ಛಗೊಳಿಸಿದರು. ಸಲಾಕೆ ಹಿಡಿದು ಪ್ಲಾಸ್ಟಿಕ್ಗಳನ್ನು ಎತ್ತಿ ಹಾಕಿ ನೀರು ಹರಿದು ಹೋಗುವಂತೆ ಮಾಡಿದರು. ನಂತರ ಅಂಗನವಾಡಿಗೆ ಭೇಟಿ ನೀಡಿದರು. ಮಕ್ಕಳಿಗೆ ಊಟಕ್ಕು ಮುಂಚೆ ಕೈ ತೊಳೆವ ಬಗ್ಗೆ ಪ್ರಾತ್ಯಕೆ ನೀಡಿದರು. ಕಾಂಪೋಸ್ಟ್ ಪಿಟ್ ಸಗಣಿ, ಬೆಲ್ಲ ಮಿಶ್ರಣ ಮಾಡಿಕೊಂಡು ಹಸಿ ಕಸ ನಿರ್ವಹಣೆ ಮಾಡುವ ವಿಧಾನ ತಿಳಿಸಲಾಯಿತು. ಜೆಜೆಎಂ ಅಡಿ ನೀರು ಪೂರೈಕೆ ಆಗುತ್ತಿರುವ ಬಗ್ಗೆ ಜನರಿಂದ ಸಿಇಒ ಮಾಹಿತಿ ಪಡೆದರು.

ಬಳಿಕ ಹಾಲವರ್ತಿ ಗ್ರಾಪಂಗೆ ಭೇಟಿ ನೀಡಿ ವಿವಿಧ ಯೋಜನೆಗಳ ಕುರಿತು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ನಡೆಸಿದರು. ಗ್ರಾಮದ ವಿವಿಧ ಕಾಮಗಾರಿಗಳನ್ನು ಖುದ್ದು ವೀಸಿ ಮಾಹಿತಿ ಪಡೆದರು. ತಾಪಂ ಇಒ ದುಂಡಪ್ಪ ತುರಾದಿ ಸ್ವಚ್ಛತಾ ಪ್ರತಿಜ್ಞಾ ವಿಧಿ ಬೋಧಿಸಿದರು.

ಇಇ ಮಹೇಶ ಶಾಸ್ತ್ರಿ, ಎಡಿ ಮಹೇಶ ಎಚ್., ನರೇಗಾ ಎಡಿ ಯಂಕಪ್ಪ, ಎಇಇ ವಿಲಾಸ್ ಬೋಸ್ಲೆ, ಸಿಡಿಪೊಇ ಜಯಶ್ರೀ, ತಾಲೂಕ ಯೋಜನಾಧಿಕಾರಿ ರಾಜೇಸಾಬ ನದಾಫ್, ಎಸ್ಬಿಎಂ ಸಮಾಲೋಚಕಿ ಬಸಮ್ಮ ಹುಡೇದ್ ಇತರರಿದ್ದರು.

## ಎಲ್ಲೆ ಮೀರಿತು ಸೋಲು–ಗೆಲುವಿನ ಲೆಕ್ಕಾಚಾರ: ಜೂ.4 ರ ಫಲಿತಾಂಶದತ್ತ ಎಲ್ಲರ ಚಿತ್ತ?!

**ವಿಜಯಪುರ :** ಲೋಕಸಭೆ ಚುನಾವಣೆ ಮೀಸಲು ಮತಕ್ಷೇತ್ರದ ಮತದಾನ ಮಂಗಳವಾರ ನಡೆದಿದ್ದು, ಮತಯಂತ್ರಗಳನ್ನು ಭದ್ರತಾಕೊಠಡಿಗಳಲ್ಲಿ ಭದ್ರಪಡಿಸಲಾಗಿದೆ. ಇನ್ನೇನಿದ್ದರೂ ಜೂ.4 ರ ಫಲಿತಾಂಶದತ್ತ ಎಲ್ಲರ ಚಿತ್ತ ನೆಟ್ಟಿದೆ.

ಉರಿ ಬಿಸಿಲನ್ನು ಲೆಕ್ಕಿಸದೇ ಮತದಾರರು ಬಿರುಸಿನ ಮತದಾನ ಮಾಡಿದ್ದರಿಂದ ಜಿಲ್ಲೆಯಲ್ಲಿ ಒಟ್ಟು ಶೇ. 66.32 ರಷ್ಟು ಮತದಾನವಾಗಿದೆ. ಬಿಸಿಲಿನ ಹೊಡೆತಕ್ಕೆ ಮತದಾನ ಕಡಮೆಯಾಗಬಹುದು ಎಂಬ ಆತಂತಕ ಎಲ್ಲರಲ್ಲೂ ಮನೆ ಮಾಡಿತ್ತು. ಆದರೆ ಮತದಾರರು ಉರಿ ಬಿಸಿಲಿಗೆ ಜಗ್ಗದೆ ತಮ್ಮ ಮತದಾನದ ಹಕ್ಕು ಚಲಾಯಿಸಿದರು.

**ಸ್ಟ್ರಾಂಗ್ ರೂಮಿನಲ್ಲಿ ಮತಪೆಟ್ಟಿಗೆ ಭದ್ರ:**

ಮತ ಯಂತ್ರ ಗಳನ್ನು ನಗರದ ಸೈನಿಕ ಶಾಲೆಯ ಭದ್ರತಾ ಕೊಠಡಿಯಲ್ಲಿ ಬಿಗಿ ಪೊಲೀಸ್ ಭದ್ರತೆಯಲ್ಲಿ ಇಡಲಾಗಿದೆ.

ಜಿಲ್ಲೆಯಲ್ಲಿ ಸ್ಥಾಪನೆಗೊಂಡ 2086 ಮತಗಟ್ಟೆಗಳಲ್ಲಿ ಸುಸೂತ್ರವಾಗಿ ಮತದಾನ ಪ್ರಕ್ರಿಯೆ ನಡೆದಿದ್ದು, ಚುನಾವಣೆ ಅಖಾಡದಲ್ಲಿರುವ 8 ಜನ ಅಭ್ಯರ್ಥಿಗಳ ಹಣೆಬರಹ ಮತದಾರರು ಇವಿಎಂ ಮತಯಂತ್ರಗಳಲ್ಲಿ ಭದ್ರಪಡಿಸಿದ್ದು, ಇನ್ನು ಒಂದು ತಿಂಗಳ ವರೆಗೆ ಅಂದರೆ ಜೂ. 4ರಂದು ಮತ ಎಣಿಕೆ ನಡೆಯಲಿದೆ. ಫಲಿತಾಂಶಕ್ಕೆ ಎಲ್ಲರೂ ಅಲ್ಲಿಯವರೆಗೆ ಕಾಯಬೇಕಿದೆ.

**ಸೋಲು– ಗೆಲುವಿನ ಲೆಕ್ಕಾಚಾರ:**

ಏತನ್ಮಧ್ಯೆ ಲೋಕಸಭೆ ಚುನಾವಣೆ ಸ್ಪರ್ಧಿಸಿರುವ ಎಲ್ಲ ಅಭ್ಯರ್ಥಿಗಳು, ಅವರ ಬೆಂಬಲಿಗರು ಹಾಗೂ ಸಾರ್ವಜನಿಕರ ವಲಯದಲ್ಲಿ ಸದ್ಯ ಸೋಲು–ಗೆಲುವಿನ ಲೆಕ್ಕಾಚಾರ ಜೋರಾಗಿದೆ. ಬಿಜೆಪಿ ಅಭ್ಯರ್ಥಿ ಗೆಲ್ಲುತ್ತಾರೋ ? ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುತ್ತಾರೋ ? ಎನ್ನುವ ಕುತೂಹಲದ ಚರ್ಚೆಗಳು ನಗರ ಸೇರಿದಂತೆ ಜಿಲ್ಲಾದ್ಯಂತ ಊರುಗಳ ಚಾವಡಿ, ಕಟ್ಟೆ, ಬಸ್‌ನಿಲ್ದಾಣ ಹಾಗೂ ಗುಡಿ, ಗುಂಡಾರ ಬಳಿ ಕುಳಿತುಕೊಳ್ಳುವ ಹಿರಿಯರು, ಯುವಕರ ಮಧ್ಯೆ ಲೋಕಸಭೆ ಚುನಾವಣೆ ಅಭ್ಯರ್ಥಿಗಳ ಗೆಲುವಿನ ಕುರಿತೇ ಚರ್ಚೆಗಳು ಬಲು ಜೋರಾಗಿ ನಡೆಯುತ್ತಿವೆ. ಈ ಮಧ್ಯೆ ಆಯಾ ಪಕ್ಷದ ಕಾರ್ಯಕರ್ತರು ತಮ್ಮ ಮುಖಂಡರ ನಿವಾಸಕ್ಕೆ ತೆರಳಿ ಫಲಿತಾಂಶದ ಚರ್ಚೆ ನಡೆಸುತ್ತಿದ್ದು, ನಮ್ಮ ಪಕ್ಷಕ್ಕೆ ಹೆಚ್ಚು ಲೀಡ್ ಬರುತ್ತೆ. ಒನ್ ವೇ ವೋಟಿಂಗ್ ಆಗಿದೆ ಸಾಹೇಬರೆ. ಗೆಲವು ನಮ್ಮದೆ ಎಂಬ ಮಾತುಗಳು ಎಲ್ಲೆಲ್ಲೂ ಕೇಳಿ ಬರುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಲೆಕ್ಕಾಚಾರ–ಕ್ಕೆ ರೆಕ್ಕೆಪುಕ್ಕಗಳು ಮೂಡಿವೆ. ಎಲ್ಲೆ ಕುಳಿತರೂ ನಿಂತರೂ ಈಗ ಚುನಾವಣೆ ಗೆಲುವಿನ ಲೆಕ್ಕಾಚಾರ ನಾಗಾಲೋಟ ಜೋರಾಗಿದೆ.

**ಮುಗಿಲು ಮುಟ್ಟಿದ ಗೆಲುವಿನ ಲೆಕ್ಕಾಚಾರ:**

ನಗರ, ಪಟ್ಟಣ, ಗ್ರಾಮೀಣ ಪ್ರದೇಶಗಳಲ್ಲಿ ಗೆಲುವಿನ ಲೆಕ್ಕಾಚಾರದ ಜೊತೆ ಜೊತೆಯಲ್ಲಿ ಬೆಟ್ಟಿಂಗ್ ಕೂಡಾ ಜೋರಾಗಿದೆ. ಜನರು ಮಾತನಾಡುತ್ತಲೇ ಪರಸ್ಪರರು ಶರ್ತ ಏನಂತಿ ಗೆಲ್ಲುವುದು ನಾವೇ ಎಂದು ಬೀಗುತ್ತಿದ್ದಾರೆ.

ಹಣ, ಬಂಗಾರ, ಜಮೀನು ಹಚ್ಚುತ್ತೇನೆ ಎಂದು ಬೆಟ್ಟಿಂಗಕ್ಕೆ ಮುಂದಾಗಿದ್ದಾರೆ. ಏನೇಯಾದರೂ ಜೂ. 4 ರಂದು ನಡೆಯುವ ಮತ ಎಣಿಕೆ ಬಳಿಕ ಹೊರ ಬೀಳುವ ಫಲಿತಾಂಶ ಎಲ್ಲ ಲೆಕ್ಕಾಚಾರಕ್ಕೆ ತೆರೆ ಎಳೆಯಲಿದೆ.

## ಹುಬ್ಬಳ್ಳಿ: ಒಂದೇ ಕುಟುಂಬದ 96 ಜನರಿಂದ ಮತದಾನ, ಪ್ರಜಾಪ್ರಭುತ್ವ ಹಬ್ಬವನ್ನು ಸಂಭ್ರಮಿಸಿದ ಅವಿಭಕ್ತ ಕುಟುಂಬ



**ಹುಬ್ಬಳ್ಳಿ :** ಪ್ರಜಾಪ್ರಭುತ್ವದ ಹಬ್ಬ ಅಂದರೆ ಮತದಾನ. ಇಂತ ಮತದಾನ ಜಾತ್ರೆಯಲ್ಲಿ ಒಂದೇ ಕುಟುಂಬದ 96 ಸದಸ್ಯರು ಮತದಾನ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ಹುಬ್ಬಳ್ಳಿ ತಾಲೂಕಿನ ನೂಲ್ವಿ ಗ್ರಾಮದಲ್ಲಿ ಒಂದೇ ಕುಟುಂಬದ ಈ 96 ಜನ ಮತದಾರರು ತಮ್ಮ ಹಕ್ಕು ಚಲಾಯಿಸಿ ಇತರರಿಗೆ ಮಾದರಿಯಾಗಿದ್ದಾರೆ. ತಾಲೂಕಿನ ನೂಲ್ವಿ ಗ್ರಾಮದ ಕಂಟೆಪ್ಪ ತೋಟದ ಅವಿಭಕ್ತ ಕುಟುಂಬದ ಸದಸ್ಯರು ಇಲ್ಲಿನ ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಶಾಲೆಯ ಮತಗಟ್ಟೆ ಸಂಖ್ಯೆ 56 ಮತ್ತ 57 ರಲ್ಲಿ ಮತದಾನ ಮಾಡಿದರು. ಮತ ಚಲಾಯಿಸಿದ ಬಳಿಕ ಎಲ್ಲರೂ ಸೇರಿ ಸೆಲ್ಫಿ ಪಡೆದು ಸಂಭ್ರಮಿಸಿದರು.

ಮೂರು ತಲೆಮಾರಿನ ಕುಟುಂಬದ ಸದಸ್ಯರು ಮತದಾನದಲ್ಲಿ ಭಾ–ಗಿಯಾಗಿದ್ದು, ಪ್ರತಿ ಚುನಾವಣೆಯಲ್ಲಿ ಮೂರು ತಂಡವಾಗಿ ವಾಹನಗಳ ಮೂಲಕ ಬಂದು ಮತ ಚಲಾವಣೆ ಮಾಡುತ್ತಿದ್ದರು. ಆದ್ರೆ ಈ ಚುನಾವಣೆಯಲ್ಲಿ ಏಕಕಾಲದಲ್ಲಿ ಬಂದು ಮತದಾನ ಮಾಡಿದರು. ಇನ್ನು ಇವರೆಲ್ಲರೂ ಒಂದೇ ಕುಟುಂಬದಲ್ಲಿ ವಾಸಿಸುತ್ತಿದ್ದು, ಕೆಲಸದ ನಿಮಿತ್ತ ಬೇರೆ ಬೇರೆ ಕಡೆ ಹೋಗುತ್ತಾರೆ. ಆದ್ರೆ ಯಾವುದೇ ಚುನಾವಣೆ ನಡೆದ್ರೂ ಸಹ ಎಲ್ಲರೂ ಒಟ್ಟಿಗೆ ಸೇರಿ ತಮ್ಮ ಹಕ್ಕನ್ನು ಚಲಾಯಿಸುತ್ತಾರೆ ಈ ತೋಟದ ಕುಟುಂಬಸ್ಥರು.

## ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಶೇ.74.35 ರಷ್ಟು ಮತದಾನ

**ಧಾರವಾಡ :** ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಶಾಂತಿಯುತ ಮತದಾನವಾಗಿದೆ. ರಾತ್ರಿ 9 ಗಂಟೆಯವರಗೆ ದೊರೆತ ಅಧಿಕೃತ ಮಾಹಿತಿಗಳ ಪ್ರಕಾರ ಅಂತಿಮವಾಗಿ ಶೇ. 74.35 ರಷ್ಟು ಮತದಾನವಾಗಿದೆ.

ಬೆಳಿಗ್ಗೆ 7 ಗಂಟೆಗೆ ಎಲ್ಲಾ 1893 ಮತಗಟ್ಟೆಗಳಲ್ಲೂ ಮತದಾನ ಪ್ರಾರಂಭವಾಯಿತು. ಬೆಳಿಗ್ಗೆ 9 ಗಂಟೆವರೆಗೆ ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಶೇ.9.38 ರಷ್ಟು ಮತದಾನವಾಗಿತ್ತು.

# ಜನ್ಮಶತಮಾನೋತ್ಸವ ಕಾರ್ಯಕ್ರಮ

**ಧಾರವಾಡ :** ಗ್ರಂಥಾಲಯ ವಿಜ್ಞಾನಕ್ಕೆಆಧುನಿಕ ಸ್ಪರ್ಶ ನೀಡಿ,ಗ್ರಂಥಾಲಯ ವಿಜ್ಞಾನದ ಬೀಜ ಬಿತ್ತಿದ ಮೊದಲ ವ್ಯಕ್ತಿ ಪ್ರೊ. ಕೆ.ಎಸ್. ದೇಶಪಾಂಡೆಯವರುಎಂದು ಹಿರಿಯಗ್ರಂಥಾಲಯ ವಿಜ್ಞಾನಿ ಡಾ.ಎಸ್ಆರ್. ಗುಂಜಾಳ ಅಭಿಪ್ರಾಯಪಟ್ಟರು.

ಅವರುಕರ್ನಾಟಕ ವಿದ್ಯಾವರ್ಧಕ ಸಂಘವು ಆಯೋಜಿಸಿದ್ದ ಗ್ರಂಥಾಲಯ ವಿಜ್ಞಾನಿ ಪ್ರೊ.ಕೆ.ಎಸ್. ದೇಶಪಾಂಡೆಜನ್ಮಶತಮಾನೋತ್ಸವಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಧಾರವಾಡದ ಕ.ವಿ.ವಿ. ಯಲ್ಲಿಗ್ರಂಥಪಾಲಕರಾಗಿತಮ್ಮ ವೃತ್ತಿಜೀವನ ಪ್ರಾರಂಭಿಸಿದ ಪ್ರೊ.ಕೆ.ಎಸ್. ದೇಶಪಾಂಡೆಗ್ರಂಥಾಲಯವನ್ನುಉತ್ಕೃಷ್ಟದರ್ಜೆಗೆ ಏರಿಸಿದರು. ಕ.ವಿ.ವಿಯಲ್ಲಿಗ್ರಂಥಾಲಯ ವಿಜ್ಞಾನ ವಿಭಾಗ ಪ್ರಾರಂಭಿಸಿದ ಕೀರ್ತಿಇವರದಾಗಿದೆ.ಕ್ರಮೇಣ ಬಿ.ಲಿಬ್ ಹಾಗೂ ಎಂ.ಲಿಬ್ ಪ್ರಾರಂಭಿಸಿದ ನಂತರ ಅನೇಕ ವಿದ್ಯಾರ್ಥಿಗಳು ವಿವಿಧ ಕಾಲೇಜುಗಳಲ್ಲಿ ಗ್ರಂಥಾಲಯ ಅಧಿಕಾರಿಗಳಾಗಲು ಕಾರಣೀಭೂತರಾದರು. ಇವರಕಾರ್ಯವೈಖರಿ ಬದ್ಧತೆಕರ್ತವ್ಯ ಪ್ರಜ್ಞೆ ಗಮನಿಸಿದ ಆಗಿನ ಯು.ಜಿ.ಸಿ ಚೇರಮನ್ ಸಿ.ಡಿ. ದೇಶಮುಖಅವರು ಕ.ವಿ.ವಿ ಗ್ರಂಥಾಲಯವನ್ನು ಪ್ರೊ. ಕೆ.ಎಸ್. ದೇಶಪಾಂಡೆ ಬೆಳೆಸಿದಂತೆ ರಾಜ್ಯದಎಲ್ಲಾ ವಿಶ್ವವಿದ್ಯಾಲಯಗಳು ಮಾದರಿಯನ್ನಾಗಿಸಿ ಬೆಳೆಸಲು ಆದೇಶಿಸಿದ್ದರು.

ಸರಳ ಜೀವನ ಪ್ರೀತಿಸುವಗುಣದಿಂದರಾಜ್ಯದಾದ್ಯಂತಅಪಾರ ಶಿಷ್ಯಬಳಗ ಹೊಂದಿದ್ದಾರೆ.ವಿವಿಧ ಸಂಘ ಸಂಸ್ಥೆಗಳ ಜೊತೆ ನಿಕಟ ಸಂಪರ್ಕ ಹೊಂದಿ ಅವುಗಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರಅವರದಾಗಿದೆ. ಅಮೇರಿಕಾದಗ್ರಂಥಾಲಯಕ್ಕೆ ಸಂದರ್ಶನ ನೀಡಿ, ಲ್ಯಾಂಡ್ಆಫ್ ಲೈಬ್ರರಿ ಎಂಬ ಶ್ರೇಷ್ಠ ಕೃತಿ ರಚಿಸಿದರು. ಗ್ರಂಥಾಲಯ ವಿಜ್ಞಾನಕ್ಕೆಅವರು ಸಲ್ಲಿಸಿದ ಸೇವಾ ಸ್ಮರಣೆಗಾಗಿಒಂದು ಸ್ಮರಣ ಸಂಚಿಕೆ ಹೊರತರಬೇಕು. ಜೊತೆಗೆ ಕ.ವಿ.ವಿ. ಗ್ರಂಥಾಲಯದ ಮುಂದೆಅವರ ಪುತ್ಥಳಿ ಅನಾವರಣವಾಗ ಬೇಕೆಂಬ ಸದಾಶಯ ವ್ಯಕ್ತಪಡಿಸಿದರು.

ವಿಶ್ರಾಂತಜಿಲ್ಲಾಗ್ರಂಥಾಲಯಾಧಿಕಾರಿ ಜಿ.ಬಿ.



ಹೊಂಬಳ ಮಾತನಾಡಿ, ಪ್ರೊ. ಕೆ.ಎಸ್. ದೇಶಪಾಂಡೆ ನಮಗೆಲ್ಲಾ ಪ್ರೇರಕ ಶಕ್ತಿ. ಮೈಸೂರ ವಿ.ವಿ. ಯಲ್ಲಿಉತ್ಕೃಷ್ಟಗ್ರಂಥಾಲಯ ಸ್ಥಾಪಿಸಿ ಡಾ.ರಾಧಾಕೃಷ್ಣನ್‌ರಿಂದ ಉದ್ಘಾಟಿಸಿದ ಕೀರ್ತಿಗೆ ಭಾಜನರಾಗಿದ್ದಾರೆ.ಸಾರ್ವಜನಿಕಗ್ರಂಥಾಲಯ ಕಾನೂನು ಪುನರ್ ಪರಿಶೀಲನಾ ಸಮಿತಿಅಧ್ಯಕ್ಷರಾಗಿ ಮಾಡಿದಕಾರ್ಯಅನನ್ಯ. ಕ.ವಿ.ವ. ಸಂಘಕ್ಕೆ ಅನ ೦ದಾನತರುವಲ್ಲಿಅವರಕೊಡುಗೆಅಪಾರಎಂದು ಹೇಳಿದರು.

ಕ.ವಿ.ವ. ಸಂಘದಅಧ್ಯಕ್ಷರಾದಚಂದ್ರಕಾಂತ ಬೆಲ್ಲದಅಧ್ಯಕ್ಷತೆ ವಹಿಸಿ ಮಾತನಾಡಿದರು.ಇದೇ ಸಂದರ್ಭದಲ್ಲಿ ಪ್ರೊ.ಕೆ.ಎಸ್. ದೇಶಪಾಂಡೆಯವರ ಪತ್ನಿಕುಸುಮತಾಯಿದೇಶಪಾಂಡೆಅವರನ್ನುಸನ್ಮಾನಿಸಿ ಗೌರವಿಸಲಾಯಿತು.ಪ್ರಾರಂಭದಲ್ಲಿಜ್ಯೋತಿಕುಲಕಣ ್ಣಿ ಹಾಗೂ ದೀಪ್ತಿ ಪಾಟೀಲ ಸಂಗಡಿಗರಿಂದ ಸುಗಮ ಸಂಗೀತಕಾರ್ಯಕ್ರಮಜರುಗಿತು.

ಡಾ. ಸಂಜೀವಕುಲಕರ್ಣಿ ಸ್ವಾಗತಿಸಿದರು.ಶಂಕರ ಹಲಗತ್ತಿ ಪ್ರಾಸ್ತಾವಿಸಿದರು. ವೀರಣ್ಣಒಡ್ಡೀನ ನಿರೂಪಿಸಿದರು.ಡಾ. ಧನವಂತ ಹಾಜವಗೋಳ ವಂದಿಸಿದರು.

ಗೋಷ್ಠಿ ಉಪನ್ಯಾಸಗಳು

ಪ್ರೊ.ಕೆ.ಎಸ್. ದೇಶಪಾಂಡೆಅವರಜನ್ಮ ಶತಮಾನೋತ್ಸವದ ನಿಮಿತ್ತ ಗ್ರಂಥಾಲಯಕ್ಕೆ ಪರ್ಯಾಯ ಪದದೇಶಪಾಂಡೆಯವರು'ದೇಶಪಾಂಡೆಯವರಜೀವನ ಮತ್ತು ಸಾಧನೆ' ಕ.ವಿ.ವಿ. ಗ್ರಂಥಾಲಯಕ್ಕೆದೇಶಪಾಂಡೆಯವರಕೊಡುಗೆ'ದೇಶಪಾಂಡೆಯವರಜೊತೆಗಿನಒಡನಾಟ' ಮತ್ತುಗ್ರಂಥಾಲಯದ ವಿಜ್ಞಾನದ ಪತ್ರಿಕೆಗಳು ಕುರಿತು ಶ್ರೀನಿವಾಸ ವಾಡಪ್ಪಿ, ಡಾ.ಸಂಜೀವಕುಲಕರ್ಣಿ, ಡಾ.ಎಸ್. ಎಲ್. ಸಂಗಮ, ಡಾ.ದಿಲೀಪ ದೇಶಪಾಂಡೆ, ಡಾ.ವಿನಾಯಕ ಬಂಕಾಪುರ ಮಾತನಾಡಿ, ಕನ್ನಡ ಭಾಷೆ ಸಂಸ್ಕೃತಿ ಉಳಿವಿಗೆ ಪ್ರೊ.ಕೆ.ಎಸ್. ದೇಶಪಾಂಡೆಕೊಡುಗೆಅಪಾರಇವರು ಪುಸ್ತಕ ಪ್ರೇಮಿ ಮಾತ್ರವಲ್ಲ. ಜನರಲ್ಲಿ ಪುಸ್ತಕ ಓದುವ ಸಂಸ್ಕೃತಿ ಬೆಳೆಸಿದರು.ಮನೆತನದಿಂದ ಅಷ್ಟೇನು ಶ್ರೀಮಂತರಾಗಿರದಿದ್ದರೂ ಹೃದಯ ಶ್ರೀಮಂತಿಕೆ ಉಳ್ಳವರಾಗಿದ್ದರು.ದೇಶದಲ್ಲಿಯೇ ಮಾದರಿಯಗ್ರಂಥಪಾಲಕರಲ್ಲಿಇವರೂಒಬ್ಬರು.ತಮ್ಮಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ವೃತ್ತಿಯ ಬಗ್ಗೆ ಬದ್ಧತೆಇದ್ದುದ್ದರಿಂದಜನಮಾನಸದಲ್ಲಿಜೀವಂತವಾಗಿದ್ದಾರೆ.

ಪ್ರೊ.ಕೆ.ಎಸ್. ದೇಶಪಾಂಡೆತಾವೊಬ್ಬರೇ ಬದುಕಲಿಲ್ಲ. ಇತರರಿಗೂಜೀವನದಲ್ಲಿ ಹೇಗೆ ಬದುಕಬೇಕೆಂಬುದನ್ನು, ಹೇಗೆ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂಬುದನ್ನು ಕಲಿಸಿದ್ದಾರೆ.ಶಾರೀರಿಕ ಶ್ರಮ, ಪುಸ್ತಕ ಪ್ರೀತಿಇವರಎರಡು ಆದ್ಯತೆಗಳಾಗಿದ್ದವು.ಪ್ರೊ.ಕೆ.ಎಸ್. ದೇಶಪಾಂಡೆ ಮುಕ್ತ ಮನಸ್ಸಿನ ಮುಗ್ಧ ಜೀವಿಗಳು ಅತಿಥಿ ಸತ್ಕಾರ್ಯ ಸತ್ಸಂಗದಲ್ಲಿಇವರಿಗೆ ಹೆಚ್ಚು ಆಸಕ್ತಿ.ಇನ್ನೊಬ್ಬರ ಒಳಿತಿಗಾಗಿ ಬಾಳಿದ ಹೃದಯವಂತರು.


ಗ್ರಂಥಾಲಯ ವಿಜ್ಞಾನದಲ್ಲಿ ಹೊಸ ಹೊಸ ಪ್ರಯೋಗ ಮಾಡಿ, ಗ್ರಂಥಾಲಯ ವಿಜ್ಞಾನಕ್ಕೆ ಬುನಾದಿ ಹಾಕಿದರು.ನಾವು ಅವರಿಂದಕಲಿತದ್ದೇ ಜಾಸ್ತಿ ಎಂದುಅಭಿಪ್ರಾಯಪಟ್ಟರು.

ದತ್ತಿಉಪನ್ಯಾಸ ವಿಶ್ರಾಂತ ಹಿರಿಯಅಧಿಕಾರಿಡಾ.ಸದಾಶಿವ ಮರ್ಜಿ 'ನಾನು ಮತ್ತು ಪುಸ್ತಕ ಪ್ರಪಂಚ' ವಿಷಯಕುರಿತುಉಪನ್ಯಾಸ ನೀಡಿ, ನನ್ನ ಶೈಕ್ಷಣಿಕ ಓದಿಗೆ ಗ್ರಂಥಾಲಯಗಳು ಪ್ರೇರಕವಾಗಿತ್ತು.ಇಂದು ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸಬೇಕಿದೆ.ಪುಸ್ತಕ ಆತ್ಮ, ಹೃದಯ ಬೆಸೆಯುವ ಮಹತ್ಕಾರ್ಯ ಮಾಡುತ್ತಿದೆ. ಪುಸ್ತಕಗಳೇ ನಮ್ಮ ಸ್ನೇಹಿತರು. ಓದುಗರು ಕ್ರಿಯಾಶೀಲರಾದರೆ ಮಾತ್ರ ಸೃಜನಶೀಲ ಸಾಹಿತ್ಯರಚನೆ ಸಾಧ್ಯ.ಪುಸ್ತಕಗಳು ನಮ್ಮ ಬದುಕು ಶ್ರೀಮಂತಗೊಳಿಸುತ್ತವೆ. ಡಾ.ಬಿ.ಆರ್. ಅಂಬೇಡ್ಕರ್‌ರ್ದಣಿವರಿಯದಓದುಗರಾಗಿದ್ದರು. ಖರ್ಚು–ವೆಚ್ಚ ಕಡಿಮೆ ಮಾಡಿ ಪುಸ್ತಕ ಖರೀದಿಸಿ ಓದುವಅವರಹವ್ಯಾಸಸ್ಮರಣೀಯಎಂದುಹೇಳಿದರು.

ಪ್ರೊ.ಮಾಲತಿ ಪಟ್ಟಣಶೆಟ್ಟಿಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರೊ.ಕೆ.ಎಸ್. ದೇಶಪಾಂಡೆಅವರಲ್ಲಿ ಜೀವನೋತ್ಸಾಹಇತ್ತು.ನಾನು ಅವರಿಂದಲೇಜೀವನ ಪಾಠಕಲಿತೆಎಂದರು.ದೇಶಪಾಂಡೆಅವರಒಡನಾಟಕುರಿತುರೋಹಿಣಿರಾವ ಮತ್ತು ಶಿವಪುತ್ರಯ್ಯ ರಾಚಯ್ಯನವರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಂಕರ ಕುಂಬಿ, ಡಾ.ಮಹೇಶ ಹೊರಕೇರಿ, ವಿಶ್ವೇಶ್ವರಿ ಹಿರೇಮಠ, ನಿಂಗಣ್ಣಕುಂಟಿ, ಎಂ.ಎಂ.ಚಿಕ್ಕಮಠ, ದುಷ್ಯಂತ ನಾಡಗೌಡ, ಡಾ.ಆನಂದ ಪಾಟೀಲ, ಡಾ. ಶಶಿಧರ ನರೇಂದ್ರ, ರಾಧಾ ಶ್ಯಾಮರಾವ, ಜಯದೇವ ಹಿರೇಮಠ, ಅರುಣ ನಾಡಿಗೇರ, ಸುರೇಶ ಹೊರಕೇರಿ, ಎಂ.ಎಸ್. ನರೇಗಲ್, ಶಿವಾನಂದ ಹೂಗಾರ, ಸಮೀರದೇಶಪಾಂಡೆ, ಸೇರಿದಂತೆ ಪ್ರೊ. ಕೆ.ಎಸ್. ದೇಶಪಾಂಡೆ ಪರಿವಾರದವರುಇದ್ದರು.








ತಾಳಿಕೋಟೆ : ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಅವರು ಕುದರಿ ಸಾಲವಾಡಗಿ ಗ್ರಾಮದ ಬೂತ ನಂ. 4ರಲ್ಲಿ ಕಾರ್ಯಕರ್ತರೊಂದಿಗೆ ಸರದಿ ಸಾಲಿನಲ್ಲಿ ನಿಂತು ಮತಚಲಾಯಿಸಿದರು. ಎ) ತಾಳಿಕೋಟೆ : ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಆನಂದ ದೊಡಮನಿ ಮತ್ತು ಕೆಪಿಸಿಸಿ ಸದಸ್ಯ ಬಿ.ಎಸ್.ಪಾಟೀಲ(ಯಾಳಗಿ) ಅವರು ಬ.ಸಾಲವಾಡಗಿ ಗ್ರಾಮದಲ್ಲಿ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಬಿ) ತಾಳಿಕೋಟೆ : ಅಸ್ಕಿ ಪೌಂಡೇಶನ್ ಅಧ್ಯಕ್ಷ ಸಿ.ಬಿ.ಅಸ್ಕಿ ಅವರು ಕೊಣ್ಣೂರ ಗ್ರಾಮದ ಮತಗಟ್ಟೆಯಲ್ಲಿ ಮತದಾನದ ಹಕ್ಕನ್ನು ಚಲಾಯಿಸಿದರು. ಸಿ) ತಾಳಿಕೋಟೆ : ಭಾರತೀಯ ಜನತಾ ಪಕ್ಷದ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ಅವರು ತಮ್ಮ ಕೂಚಬಾಳ ಗ್ರಾಮದ ಮತಗಟ್ಟೆಯಲ್ಲಿ ಕುಟುಂಭ ಸಮೇತ ತೆರಳಿ ಮತ ಚಲಾಯಿಸಿದರು. ಡಿ) ತಾಳಿಕೋಟೆ : ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ತಾಳಿಕೋಟೆ ಪಟ್ಟಣದ ಮತಗಟ್ಟೆಯಲ್ಲಿ ಮತದಾನದ ಹಕ್ಕನ್ನು ಚಲಾಯಿಸಿದರು. ಇ) ತಾಳಿಕೋಟೆ : ತಾಲೂಕಿನ ಗಡಿಸೋಮನಾಳ ಗ್ರಾಮದಲ್ಲಿ ಕಾಲನೋವಿನಿಂದ ಬಳಲುತ್ತಿದ್ದ ಸಿದ್ದಯ್ಯ ಮಠ ಅವರನ್ನು ಕುಟುಂಭದವರು ಮತಗಟ್ಟೆಯವರೆಗೂ ಹೊತ್ತುಕೊಂಡು ಬಂದು ಮತ ಚಲಾಯಿಸಲು ಅನುವು ಮಾಡಿಕೊಟ್ಟರು.

## 15 ರಂದು ಜನಸಂಪರ್ಕ ಸಭೆ

**ಬಾಗಲಕೋಟೆ :** ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಮೇ 15 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ವರೆಗೆ ಮುಧೋಳ ತಾಲೂಕಾ ಪಂಚಾಯತ ಕಾರ್ಯಾಲಯದಲ್ಲಿ ಜನಸಂಪರ್ಕ ಸಭೆ ಹಮ್ಮಿಕೊಂಡಿದ್ದಾರೆ. ಸರಕಾರಿ ಕಚೇರಿಯಲ್ಲಿ ಅಧಿಕೃತ ಕೆಲಸಗಳನ್ನು ಮಾಡಿಕೊಡುವಲ್ಲಿ ವಿನಾಕಾರಣ ವಿಳಂಬ ಹಾಗೂ ಇನ್ನಿತರೆ ತೊಂದರೆ ಆಗಿದ್ದರೆ ಅಂತಹ ಅಧಿಕಾರಿ ಮತ್ತು ನೌಕರರ ವಿರುದ್ದ ಸಾರ್ವಜನಿಕರು ಸದರಿ ಜನಸಂಪರ್ಕ ಸಭೆಗೆ ಹಾಜರಾಗಿ ಲಿಖಿತ ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354–236200, 295170ಗೆ ಸಂಪರ್ಕಿಸಬಹುದಾಗಿದೆ.

## ಜೈನ ತತ್ವಶಾಸ್ತ್ರ ಅಳವಡಿಕೆ: ಅತ್ಯುತ್ತಮ ಜೀವನದ ದಾರಿ




**ಬೆಳಗಾವಿ :** ಜೈನ ಧರ್ಮ ಇದೊಂದು ಕೇವಲ ಧರ್ಮವಾಗದೆ ಉತ್ತಮ ಜೀವನಶೈಲಿಯ ಜ್ಞಾನ ನೀಡುವ ತತ್ವಶಾಸ್ತ್ರಗಳನ್ನು ಹೊಂದಿದ ಧರ್ಮವಾಗಿದೆ. ಜೈನ ತತ್ವಶಾಸ್ತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಅತ್ಯುತ್ತಮ ಜೀವನದ ದಾರಿಯಾಗಲಿದೆ ಎಂದು ಭರತೇಶ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿನೋದ ದೊಡ್ಡಣ್ಣವರ ಅವರು ಇಂದಿಲ್ಲಿ ಅಭಿಪ್ರಾಯಪಟ್ಟರು.

ಬುಧವಾರದಂದು ಬೆಳಗಾವಿ ಅನಿಗೋಳದ ಶ್ರೀ ಆದಿನಾಥ ಭವನದಲ್ಲಿ ಜೈನ ಆಗಮ ಮಿಷನ ವತಿಯಿಂದ ಆಯೋಜಿಸಲಾದ 8 ನೇ ಧಾರ್ಮಿಕ ಶಿಕ್ಷಣ ಶಿಬಿರವನ್ನುಉದ್ಘಾಟಿಸಿ ಮಾತನಾಡಿದ ಅವರು, ಇಂದು ಇಡಿ ವಿಶ್ವದಲ್ಲಿ ಜೈನ ತತ್ವಜ್ಞಾನ ಮತ್ತು ತತ್ವಶಾಸ್ತ್ರಗಳ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ. ಅನಾದಿ ಕಾಲದಿಂದಲೂ ಸಹ ಜೈನ ತತ್ವಶಾಸ್ತ್ರ ಅನುಕರಣೆಯಲ್ಲಿದೆ. ಇಂದು ಅನೇಕ ಹಿರಿಯ ಅಧಿಕಾರಿಗಳು, ಸಾಹಿತಿಗಳು , ವಿಜ್ಞಾನಿಗಳು ಚಲನಚಿತ್ರ ನಟರು ಸೇರಿದಂತೆ ಅನೇಕರು ಜೈನ ತತ್ವಶಾಸ್ತ್ರಗಳನ್ನು ಪಾಲಿಸುತ್ತಯಶಸ್ವಿಜಿವನನಡೆಸುತ್ತಿದ್ದಾರೆಂದುಅವರು ಹೇಳಿದರು.

ಇಂದು ಧಾರ್ಮಿಕ ಶೀಕ್ಷಣ ಎಲ್ಲಿಯೂ ಸಿಗುತ್ತಿಲ್ಲ . ಬೆಳಗಾವಿ ಅನಗೋಳ ಭಾಗದ ಶ್ರಾವಕರು ಕಳೆದ 8 ವರ್ಷಗಳಿಂದ ಧಾರ್ಮಿಕ ಶಿಕ್ಷಣ ಶಿಬಿರವನ್ನು ಆಯೋಜಿಸುತ್ತ ಬಂದಿದ್ದು, ಈ ಕಾರ್ಯ ಶ್ಲಾಘನೀಯವಾಗಿದೆ,. ಇಂತಹ ಕಾರ್ಯಗಳು ಮುಂದೆಯುನಡೆಯಲಿಎಂದುಅವರುಹಾರೈಸಿದರು.

ಸಮಾರಂಭದಲ್ಲಿ ಹಿರಿಯ ನ್ಯಾಯವಾದಿ ರವಿರಾಜ ಪಾಟೀಲ ಅವರು ಮಾತನಾಡಿ, ಇಂದಿನ ಮಕ್ಕಳಿಗೆ ಧಾರ್ಮಿಕ ಶೀಕ್ಷಣ ನೀಡುವುದು ಅಗತ್ಯವಾಗಿದೆ. ಈ ಧಾರ್ಮಿಕ ಶಿಕ್ಷಣದ ಮೂಲಕ ಮಕ್ಕಳಲ್ಲಿ ಉತ್ತಮ ಸಂಸ್ಕಾರಗಳು ಬೆಳೆಯಲು ಸಹಕಾರಿಯಾಗುತ್ತವೆ. ಇಂದಿನ ಈ ಧಾರ್ಮಿಕ ಶಿಬಿರದಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿದೆ ಎಂದು ಹೇಳಿದ ಅವರು ಈ ಶಿಬರವನ್ನು ಆಯೋಜಿಸಿದ ಆಯೋಜಕರ ಪ್ರಯತ್ನಕ್ಕೆ ಯಶಸ್ಸು ದೊರೆಯಲಿ ಎಂದು ಅವರು ಹೇಳಿದರು.

ಸಮಾರಂಭದ ವೇದಿಕೆ ಮೇಲೆ ಕೆಪಿಸಿಸಿ ಸದಸ್ಯ ಸುನಿಲ ಹನಮಣ್ಣವರ, ಪ್ರಮೋದ ಪಾಟೀಲ, ರಾಜಶೇಖರ ಭೇಂಡಿಗೇರಿ ,ವಿಕಾಸ ಜೈನ, ರಿತಿಕ ಜೈನ, ವಿಶೇಷ ಜೈನ, ಸುಬ್ರತ ಜೈನ, ಪುಷ್ಪಕ ಹನಮಣ್ಣವರ ಸೇರಿದಂತೆಮೊದಲಾದವರುಉಪಸ್ಥಿತರಿದ್ದರು.ರಾಜು ಹನಮಣ್ಣವರ ಅತಿಥಿಗಳನ್ನು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಮಿಥುನ ಶಾಸ್ತ್ರಿ ಮತ್ತು ಅನೇಕಾಂತ ಶಾಸ್ತ್ರಿಗಳು ಧಾರ್ಮಿಕ ಶಿಕ್ಷಣ ಶಿಬಿರವನ್ನು ನಡೆಸಿ ಜೈನ ಧರ್ಮದ ಆಗಮ, ಆಚರಣೆ, ನಿಯಮಾವಳಿಗಳ ಬಗ್ಗೆ ಶಿಕ್ಷಣ ನೀಡಿದರು. ಈ ಶಿಬಿರದಲ್ಲಿ ಸುಮಾರು 400 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಧಾರ್ಮಿಕ ಶಿಕ್ಷಣ ಪಡೆದರು.

### ಲೋಕಸಭಾ ಚುನಾವಣೆ–2024: ಮತದಾನ ಹೆಚ್ಚಳ

## ಬೆಳಗಾವಿ ಜಿಲ್ಲೆಯಲ್ಲಿ ಶೇ.74.87 ರಷ್ಟು ಮತದಾನ

**ಬೆಳಗಾವಿ :** ಪ್ರಜಾಪ್ರಭುತ್ವದ ಹಬ್ಬವಾಗಿರುವ ಚುನಾವಣೆಯು ಶಾಂತಿಯುತವಾಗಿ ನಡೆದಿದ್ದು, ಮೂರು ಲೋಕಸಭಾ ಮತಕ್ಷೇತ್ರಗಳ ವ್ಯಾಪ್ತಿಯನ್ನು ಒಳಗೊಂಡಿರುವ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟಾರೆ ಶೇ.74.87 ರಷ್ಟು ಮತದಾನವಾಗಿರುತ್ತದೆ.

01– ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಶೇ.78.51 ಮತ್ತು 02–ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಶೇ.71.38ರಷ್ಟು ಮತದಾನವಾಗಿರುತ್ತದೆ. ಇದಲ್ಲದೇ ಕೆನರಾ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಬೆಳಗಾವಿ ಜಿಲ್ಲೆಯ ಖಾನಾಪುರ ವಿಧಾನಸಭಾ ಕ್ಷೇತ್ರದಲ್ಲಿ ಶೇ.73.87 ಮತ್ತು ಕಿತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಶೇ. 76.25 ರಷ್ಟು ಮತದಾನವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಮತದಾನ ಪ್ರಮಾಣ ಹೆಚ್ಚಳ: ಕಳೆದ ಬಾರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗಿದೆ.

ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ 2019 ರಲ್ಲಿ ಶೇ.75.52ರಷ್ಟುಮತದಾನವಾಗಿದ್ದರೆ2024 ರಲ್ಲಿ ಶೇ.78.51 ರಷ್ಟು ಮತದಾನವಾಗುವ ಮೂಲಕಪ್ರತಿಶತ3ರಷ್ಟುಹೆಚ್ಚಳವಾಗಿರುತ್ತದೆ. ಅದೇರೀತಿ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ 2019 ರ ಚುನಾವಣೆಯಲ್ಲಿ ಶೇ. 67.70 ರಷ್ಟು ಮತದಾನವಾಗಿತ್ತು. ಈ ಬಾರಿ 2024 ರಲ್ಲಿ ಶೇ.71.38 ರಷ್ಟು ಮತದಾನವಾಗುವ ಮೂಲಕಪ್ರತಿಶತ4ರಷ್ಟುಹೆಚ್ಚಳವಾಗಿರುತ್ತದೆ ಎಂದು ನಿತೇಶ್ ಪಾಟೀಲ ತಿಳಿಸಿದ್ದಾರೆ.

ಬೆಳಿಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಿತು. ಕೆಲವು ಕಡೆಗಳಲ್ಲಿ 6 ಗಂಟೆಯ ಒಳಗೆ ಮತಗಟ್ಟೆಯ ಸರದಿಯಲಿದ್ದ ಮತದಾರರಿಗೆ ಟೋಕನ್ ವಿತರಿಸಿದ ಬಳಿಕ ಮತದಾನಕ್ಕೆ ಅವಕಾಶ ಕಲ್ಪಿಸಲಾಯಿತು. ಜಿಲ್ಲೆಯ ಎಲ್ಲ ಕಡೆಗಳಲ್ಲೂ ಮತದಾನ ಶಾಂತಿಯುತವಾಗಿ ನಡೆದಿರುತ್ತದೆ.

ಅಂತರ್ ರಾಷ್ಟ್ರೀಯ ನಿಯೋಗದ ಭೇಟಿ: ಭಾರತ ದೇಶದ ಚುನಾವಣಾ ಪ್ರಕ್ರಿಯೆ ವೀಕ್ಷಣೆಗೆ ಆಗಮಿಸಿರುವ ಐದು ದೇಶಗಳ ಚುನಾವಣಾ ಆಯೋಗಗಳ ಹತ್ತು ಜನ ಅಂತರ್ ರಾಷ್ಟ್ರೀಯ ನಿಯೋಗದ ಸದಸ್ಯರು ನಸುಕಿನ ಜಾವದಿಂದಲೇ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿ ಮತದಾನ ವೀಕ್ಷಿಸಿದರು. ಬೆಳಗಾವಿ ಜಿಲ್ಲೆಗೆ ಆಗಮಿಸಿದ ಕಾಂಬೋಡಿಯಾ, ನೇಪಾಳ, ಮೊಲ್ಡೊವಾ, ಸಿಷೆಲ್ ಹಾಗೂ ತುನಿಷಿಯಾ ದೇಶಗಳ ಚುನಾವಣಾ ಆಯೋಗಗಳ ಹತ್ತು ಸದಸ್ಯರ ತಂಡವು ವಾಸ್ತವ ಮತದಾನ ಆರಂಭಕ್ಕಿಂತ ಮುಂಚೆ ನಡೆಯುವ ಅಣಕು ಮತದಾನ ಪ್ರಕ್ರಿಯೆಯನ್ನು ಕೂಡ ವೀಕ್ಷಿಸಿದರು.

ಇದಲ್ಲದೇ ಸಖಿ ಮತಗಟ್ಟೆ(ಪಿಂಕ್ ಬೂತ್) ಸೇರಿದಂತೆ ವಿವಿಧ ಮತಟಗಟ್ಟೆಗಳಿಗೂ ಭೇಟಿ ನೀಡಿ ಚುನಾವಣಾ ಪ್ರಕ್ರಿಯೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು. ಸಾಮಾನ್ಯ ವೀಕ್ಷಕರು ಹಾಗೂ

**ಚುನಾವಣಾಧಿಕಾರಿಗಳ ನಿಗಾ:**

ಬೆಳಗಾವಿ ಹಾಗೂ ಚಿಕ್ಕೋಡಿ ಲೋಕಸಭಾ ಕ್ಷೇತ್ರಗಳ ಸಾಮಾನ್ಯ ವೀಕ್ಷಕರಾದ ಎಂ.ಕೆ.ಅರವಿಂದ ಕುಮಾರ್ ಹಾಗೂ ಜಿ.ಎಸ್.ಪಾಂಡಾ ದಾಸ್ ಅವರು ಕೂಡ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿ ಮತದಾನ ಸುಗಮ ಹಾಗೂ ಶಾಂತಿಯುತವಾಗಿರುವ ಬಗ್ಗೆ ಖಚಿತಪಡಿಸಿಕೊಂಡರು.

ಇದಲ್ಲದೇ ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆಯ ಮೂಲಕ ಸೂಕ್ಷ್ಮ ಮತಗಟ್ಟೆಗಳಲ್ಲಿ ನಡೆದ ಮತದಾನ ಪ್ರಕ್ರಿಯೆಯನ್ನು ವೀಕ್ಷಿಸಿದರು.

ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಬೆಳಗಾವಿ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿ ನಿತೇಶ್ ಪಾಟೀಲ ಮತ್ತು ಚಿಕ್ಕೋಡಿ ಕ್ಷೇತ್ರದ ಚುನಾವಣಾಧಿಕಾರಿ ರಾಹುಲ್ ಶಿಂಧೆ ಅವರು ಕೂಡ ಮತಗಟ್ಟೆಗಳಿಗೆ ಭೇಟಿ ನೀಡಿ, ಮತದಾರರಿಗೆ ಒದಗಿಸಲಾಗಿರುವ ಮೂಲಸೌಕರ್ಯಗಳನ್ನುಪರಿಶೀಲಿಸಿದರು.

**ಜಿಲ್ಲೆಯಲ್ಲಿ ನಡೆದ ಮತದಾನ ವಿವರ:**

* ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಒಟ್ಟಾರೆ ಶೇ.ಶೇ.71.38ರಷ್ಟುಮತದಾನವಾಗಿರುತ್ತದೆ. ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಅರಭಾವಿ ವಿಧಾನಸಭಾ ಕ್ಷೇತ್ರದಲ್ಲಿ ಶೇ.71.92, ಗೋಕಾಕ ಶೇ.71.06 ಬೆಳಗಾವಿ (ಉತ್ತರ) ಶೇ.63.42 ಬೆಳಗಾವಿ(ದಕ್ಷಿಣ) ಶೇ.67.52 ಬೆಳಗಾವಿ (ಗ್ರಾಮೀಣ) ಶೇ.76.87 ಬೈಲಹೊಂಗಲ ಶೇ.73.5 ಸವದತ್ತಿ–ಯಲ್ಲಮ್ಮ ಶೇ.76.73 ಹಾಗೂ ರಾಮದುರ್ಗ ಶೇ.73.6 ಮತದಾನ ಆಗಿರುತ್ತದೆ. ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಒಟ್ಟಾರೆ ಶೇ.78.51 ಮತದಾನವಾಗಿರುತ್ತದೆ. ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ನಿಪ್ಪಾಣಿ ವಿಧಾನಸಭಾ ಕ್ಷೇತ್ರದಲ್ಲಿ ಶೇ. 79.73, ಚಿಕ್ಕೋಡಿ–ಸದಲಗಾ ಶೇ. 79.58 ಅಥಣಿ ಶೇ.78.66 ಕಾಗವಾಡ ಶೇ.78.84 ಕುಡಚಿ ಶೇ. 74.74 ರಾಯಬಾಗ ಶೇ.75.8 ಹುಕ್ಕೇರಿ ಶೇ.78.35 ಹಾಗೂ ಯಮಕನಮರಡಿ ಶೇ.82.14 ರಷ್ಟು ಮತದಾನ ಆಗಿರುತ್ತದೆ.

**ಮತಯಂತ್ರಗಳುಸ್ಟ್ರಾಂಗ್‌ರೂಮ್‌ನಲ್ಲಿಭದ್ರ:**

ಮತದಾನದ ಬಳಿಕ ಚುನಾವಣಾ ಸಿಬ್ಬಂದಿಯು ತಮ್ಮ ತಮ್ಮ ಮತಗಟ್ಟೆಗಳಿಂದ ಎಲೆಕ್ಟ್ರಾನಿಕ್ ಮತಯಂತ್ರಗಳನ್ನುಪೊಲೀಸ್ ಭದ್ರತೆಯೊಂದಿಗೆ ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಡಿಮಸ್ಟ ರಿಂಗ್ ಕೇಂದ್ರಗಳಿಗೆ ರಾತ್ರಿಯವರೆಗೆ ತಲುಪಿಸಿದರು. ಡಿಮಸ್ಟರಿಂಗ್ ಕೇಂದ್ರಗಳಿಂದ ಮತ ಎಣಿಕೆ ಕೇಂದ್ರಗಳಲ್ಲಿ ಸ್ಥಾಪಿಸಲಾಗಿರುವ ಸ್ಟ್ರಾಂಗ್ ರೂಮ್ ಗಳಿಗೆ ಮಧ್ಯರಾತ್ರಿಯವರೆಗೆ ಮತಯಂತ್ರಗಳನ್ನು ಕಳುಹಿಸಲಾಯಿತು.

ಬೆಳಗಾವಿ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕೇಂದ್ರವನ್ನು ಬೆಳಗಾವಿ ನಗರದ ಆರ್ಪಿ.ಡಿ. ಮಹಾವಿದ್ಯಾಲಯದಲ್ಲಿ ಹಾಗೂ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕೇಂದ್ರವನ್ನು ಚಿಕ್ಕೋಡಿ ನಗರದ ಆರ್ಡಿ.ಕಾಲೇಜಿನಲ್ಲಿ ಸ್ಥಾಪಿಸಲಾಗಿರುತ್ತದೆ.

ಆಯಾ ಮತ ಎಣಿಕೆ ಕೇಂದ್ರಗಳ ಸ್ಟ್ರಾಂಗ್ ರೂಮ್ ಗಳಲ್ಲಿ ಮತಯಂತ್ರಗಳನ್ನು ಇರಿಸಲಾಗಿರುತ್ತದೆ. ಜೂನ್ 4 ರಂದು ಮತ ಎಣಿಕೆ ನಡೆಯಲಿದೆ.

**ಜಿಲ್ಲೆಯ ಜನತೆಗೆ ಕೃತಜ್ಞತೆ:**


ಲೋಕಸಭೆ ಚುನಾವಣೆಯನ್ನು ಅತ್ಯಂತ ಶಾಂತಿಯುತ ಹಾಗೂ ಸುಗಮವಾಗಿ ನಡೆಸಲು ಸಹಕರಿಸಿದ ಜಿಲ್ಲೆಯ ಪ್ರತಿಯೊಬ್ಬ ನಾಗರಿಕರಿಗೆ, ಜನಪ್ರತಿನಿಧಿಗಳು, ಎಲ್ಲ ರಾಜಕೀಯ ಪಕ್ಷಗಳ ಮುಖಂಡರು, ಕಂದಾಯ, ಜಿಲ್ಲಾ ಪಂಚಾಯತಿ ಹಾಗೂ ಪೊಲೀಸ್ ಸೇರಿದಂತೆ ಪ್ರತಿಯೊಂದು ಇಲಾಖೆಗಳಅಧಿಕಾರಿಗಳು/ಸಿಬ್ಬಂದಿ,ಸ್ವೀಪ್ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಮತದಾನ ಹೆಚ್ಚಳಕ್ಕೆ ಕೈಜೋಡಿಸಿದ ಸಂಘ–ಸಂಸ್ಥೆಗಳುಹಾಗೂಮಾಧ್ಯಮಪ್ರತಿನಿಧಿಗಳಿಗೆ ಜಿಲ್ಲಾ ಚುನಾವಣಾಧಿಕಾರಿ ನಿತೇಶ್ ಪಾಟೀಲ ಮತ್ತು ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿ ರಾಹುಲ್ ಶಿಂಧೆ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

## ಜಿಲ್ಲೆಯಲ್ಲಿ ವಿಕಲಚೇತನರಿಂದ ಶೇ.81 ರಷ್ಟು ಮತದಾನ

**ಬೆಳಗಾವಿ :** ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ಕ್ಕೆ ಮೇ.7 ರಂದು ನಡೆದ ಮತದಾನದಲ್ಲಿ ಬೆಳಗಾವಿ ಜಿಲ್ಲೆಯ 2 ಲೋಕಸಭಾ ಕ್ಷೇತ್ರಗಳು 16 ವಿಧಾನಸಭಾ ಮತಕ್ಷೇತ್ರಗಳು ಹಾಗೂ ಕೆನರಾ ಲೋಕಸಭಾ ಕ್ಷೇತ್ರದ 2 ವಿಧಾನ ಸಭಾ ಮತಕ್ಷೇತ್ರಗಳು ಸೇರಿದಂತೆ ಜಿಲ್ಲೆಯ 18 ಮತಕ್ಷೇತ್ರಗಳಲ್ಲಿ ವಿಕಲಚೇತನರಿಗಾಗಿ ವಿಶೇಷ ಮತಗಟ್ಟೆಗಳನ್ನು ರಚಿಸಲಾಗಿತ್ತು. ಸದರಿ ಜಿಲ್ಲೆಯ ಒಟ್ಟು 52,760 ವಿಕಲಚೇತನ ಮತದಾರರ ಪೈಕಿ ಒಟ್ಟು 42,852 ವಿಕಲಚೇತನ ಮತದಾರರು ಮತದಾನ ಮಾಡಿದ್ದು, 18 ಮತಕ್ಷೇತ್ರವಾರು ಜಿಲ್ಲೆಯಲ್ಲಿ ವಿಕಲಚೇತನರಿಂದ ಶೇ. 81 ರಷ್ಟು ಮತದಾನವಾಗಿರುತ್ತದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಜಗಜ್ಯೋತಿ ಬಸವಣ್ಣ



**ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ**
**ಚೆಲ್ಲಿದನು ತಂದು ಶಿವ ಬೆಳಕ ನಾಡೊಳಗೆ**
**ಜನವು ಹಾಡುವುದು...**
**ಉತ್ತಿ ಬಿತ್ತುವ ಮಂತ್ರ**
**ಬೆಳೆಯುವ ಮಂತ್ರ – ಸತ್ಯ ಶಿವ ಮಂತ್ರ**
**ನಿನ್ಹೆಸರು ಬಸವಯ್ಯ**
**ಮರ್ತ್ಯದೊಳು ಮಂತ್ರ ಜೀವನಕೆ.....**

ಎಂಬುದಾಗಿ ಒಬ್ಬ ಕವಿಯು ಶ್ರೀ ಗುರು ಲಿಂಗಾಯತ ಸಂತ, ಜಗಜ್ಯೋತಿ,ಅಣ್ಣ ಬಸವಣ್ಣನ ಕುರಿತು ಸಮೃದ್ಧ ಭಕ್ತಿಯ ಸಾಲುಗಳಲ್ಲಿ ವರ್ಣಿಸಿದ್ದಾರೆ.

ಆಗಿನ ಕಟ್ಟಾವಾದಿಗಳ ಕಾಲದೊಳು ಸಮಾಜ ಸುಧಾರಣೆಗಾಗಿ ಜಗದೋದ್ಧಾರ ಹಾಗೂ ಲೋಕಕಲ್ಯಾಣಾ ರ್ಥವಾಗಿ ಕ್ರಿಸ್ತಶಕ 1134ರ ಕಾಲಘಟ್ಟದಲ್ಲಿ ಮಾದರಸ ಮಾದಲಾಂಬಿಕೆಯ ಶೈವ ಬ್ರಾಹ್ಮಣ ದಂಪತಿಗಳ ಉದರದಲ್ಲಿ ಜನಿಸಿತೊಂದು ಕ್ರಾಂತಿಕಿಡಿ.ಹುಟ್ಟೂರು ಬಸವನ ಬಾಗೇವಾಡಿಯ ಕೀರ್ತಿ ಪತಾಕೆಯನ್ನು ಹಾರಿಸುವಲ್ಲಿ ಆ ಶಿಶು ಎಂದೂ ಮೋಸ ಮಾಡಲಿಲ್ಲ. "ಶ್ರೀ ಜಾತವೇದ ಮುನಿಗಳ" ಶೈಕ್ಷಣಿಕ ಮಾರ್ಗದರ್ಶನದಲ್ಲಿ ಉಚಿತ ಸಂಸ್ಕಾರ, ವೇದೋಪನಿಷತ್ತು ಹಾಗೂ ಸದ್ಗುಣಗಳ ಪಥ್ಯವು ಶ್ರೀ ಬಸವಣ್ಣನವರನ್ನು ಸರ್ವೋತ್ತಮನನ್ನಾಗಿ ಬೆಳೆಸುವಲ್ಲಿ ದಾರಿದೇವಿಗೆಗಳಾದವು.ಇಷ್ಟಲಿಂಗದ ಪೂಜಿತರಾದ ಶ್ರೀ ಬಸವರಸರು ಲೋಕವೆಲ್ಲ ಶಿವನ ರೂಪವಾಗಿದ್ದು ಪ್ರತಿ ಕಣ ದಗುಳುಗಳು ಅವನ ಆಜ್ಞೆಯಲ್ಲಿ ನಲಿದಾಡುವವು ಎಂದು ಶಿವ ಭಕ್ತಿಯನ್ನು, ಸರಳ ಆಚಾರಗಳನ್ನು ಸಮಾಜಕ್ಕೆ ತಿಳಿಸಿ ಕೊಡುವುದರ ಮೂಲಕ ಧಾರ್ಮಿಕ ಸಾಮಾಜಿಕ ಸುಧಾರಣಾ ಕ್ರಾಂತಿಯನ್ನು ಮಾಡಿದರು. ಮುಂದೆ ನಿರ್ಮೂಹಿಯಾಗಿದ್ದ ಬಸವಣ್ಣನವರು ದೈವವಾಣಿಯ ಆಜ್ಞೆಯ ಮೇರೆಗೆ ಬಿಜ್ಜಳ ರಾಜಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿದ್ದ ಬಲದೇವರಸರ ಮಗಳಾದ ನೀಲಗಂಗಮ್ಮಳನ್ನು ವಿವಾಹವಾಗುವರು ತದನಂತರ ಅದೇ ರಾಜ್ಯದಲ್ಲಿ ಕೋಶಾಧ್ಯಕ್ಷರಾಗಿ ಕಾಯಕ ಮುಂದುವರಿಸುವರು. ಆಧ್ಯಾತ್ಮದ ಸೆಳೆತವು ಶ್ರೀ ಬಸವರನ್ನು ಸೂಜಿಗಲ್ಲಿನಂತೆ ಬರ ಸೆಳೆಯುತ್ತಿತ್ತು.ಭೋಗದ ಲೌಕಿಕ ಜೀವನವು ಕ್ಷಣ ಕ್ಷಣಕ್ಕೂ ನಶಿಸಿ ಲೋಕೋದ್ಧಾರದ ಬೀಜವು ಚಿಗುರೊಡೆಯಲು ಪ್ರಾರಂಭಿಸಿ ಶ್ರೀ ಗುರು ಅವರನ್ನು ಕಲ್ಯಾಣ ನಗರಕ್ಕೆ ಕರೆದೊಯ್ಯುವಂತೆ ಮಾಡಿತು. ಅಲ್ಲಿಂದ ಶ್ರೀ ಬಸವರಸರು ಆ ಶರಣ ಕೂಟದ ಅಣ್ಣನಾಗಿ ಹೊರಹೊಮ್ಮಿದರು. ಜಗತ್ತಿನ ಭಕ್ತಿಯ ಮೊಟ್ಟ ಮೊದಲ ಲೋಕಸಭೆಯು ಶ್ರೀಕಲ್ಯಾಣ ನಗರದಲ್ಲಿ ಜಾತಿ ರಹಿತ ಲಿಂಗ ತಾರತಮ್ಯವಿಲ್ಲದ ಮಹಾಶರಣರ ಕೂಟವು ಅಂದರೆ 770 ಅಮರ ಗಣಂಗಳು ರಚನೆಯಾದವು. ಆ ಸಭೆಯ ಶೂನ್ಯ ಪೀಠಾಧ್ಯಕ್ಷತೆಯನ್ನು "ಶ್ರೀ ಅಲ್ಲಮಪ್ರಭುಗಳು" ವಹಿಸಿಕೊಂಡಿದ್ದರು ಅಲ್ಲಿರುವ ಗಣಂಗಳ ಕಾಯಕ ಹಾಗೂ ವಚನಾಮೃತಗಳು ಲೋಕದ ಕೊಳೆಯನ್ನು ನಶಿಸಿ ಪರಿಶುದ್ಧಗೊಳಿಸುವ ಶುದ್ಧಿಕ ಯಂತ್ರಗಳಂತೆ ಕಾರ್ಯನಿರ್ವಹಿಸುತ್ತಿದ್ದವು.

**ಬಸವಣ್ಣನವರ ಸಾಮಾಜಿಕ ಸುಧಾರಣೆಗಳು**

ಕಟ್ಟಾ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿದ್ದ ಜಡ ಸಮಾಜವನ್ನು ಇವರು ತಮ್ಮ ತತ್ವವಾದ "ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ"ಮೂಲಕ ಸಮಾಜದ ಜಡತ್ವವನ್ನು ಹೋಗಲಾಡಿಸುವ ಕಾರ್ಯಗಳನ್ನು ಮಾಡಿದರು. ಸಮಾಜದಲ್ಲಿಯ ಶ್ರೇಣಿ ತಾರತಮ್ಯ ,ಲಿಂಗ ತಾರತಮ್ಯ ಹಾಗೂ ಮೂಢ ಆಚರಣೆಗಳನ್ನು ಬಹಿಷ್ಕರಿಸುವುದರ ಮೂಲಕ ಸಮಾಜದಲ್ಲಿ 12ನೇ ಶತಮಾನವನ್ನು ಭಕ್ತಿಯ ಕ್ರಾಂತಿಯುಗವನ್ನಾಗಿ ಹುಟ್ಟು ಹಾಕಿದರು.

* ಜಾತಿ ಮತೀಯ ಕಂಡನೆ
* ಮೂಢನಂಬಿಕೆಯ ಖಂಡನೆ
* ಬಹುದೇವತಾರಾಧನೆಯ ಖಂಡನೆ
* ಮೂರ್ತಿ ಪೂಜೆಯ ಖಂಡನೆ
* ಪ್ರಾಣಿ ಬಲಿಯ ನಿರ್ಮೂಲನೆ
* ಸಹ ಭೋಜನಕ್ಕೆ ಪ್ರೋತ್ಸಾಹ
* ಅಂತರ್ಜಾತಿಯ ವಿವಾಹಕ್ಕೆ ಪ್ರೋತ್ಸಾಹ
* ಅಸ್ಪೃಶ್ಯತೆಯ ಖಂಡನೆ

*ನಿತ್ಯಕರ್ಮ. ಇವೆಲ್ಲವೂ ಇವರ ತತ್ವಾದರ್ಶಕಗಳಾಗಿದ್ದವು. ಸಮಾಜದಲ್ಲಿ ಪ್ರತಿಯೊಂದು ಹಂತದಲ್ಲೂ ಸುಧಾರಣೆಗಾಗಿ ಹಗಲಿರುಳು ದುಡಿದು ಸಾಧಿಸಿದ ಅಧಮ್ಯ ಚೇತನವಾಗಿದ್ದರು ಶ್ರೀ ಬಸವಣ್ಣನವರು.

**ಧಾರ್ಮಿಕ ಸುಧಾರಣೆಗಳು**

ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕರಾದವರು ಪುರುಷ ಮತ್ತು ಪ್ರಕೃತಿಯ ಮಿಲನದ ತತ್ವ ಹೇಳಿದರು ಪ್ರತಿಯೊಬ್ಬರ ಜೀವನದಲ್ಲಿ ಅಷ್ಟಾವರಣ ಪಾಲನೆಯ ಸಿದ್ಧಾಂತವನ್ನು ಮಂಡಿಸಿದರು .

1. ವಿಧೇಯತೆ 2. ಲಿಂಗ ಪೂಜೆ
3. ಜಂಗಮಸೇವೆ 4. ಹಣೆಗೆ ವಿಭೂತಿ
5. ರುದ್ರಾಕ್ಷಿ ಧಾರಣೆ 6. ಪಾದೋಧಕ ಸೇವನೆ
7. ನೈವೇದ್ಯ ನೀಡಿ ಪ್ರಸಾದ ಸ್ವೀಕಾರ
8. ಓಂ ನಮಃ ಶಿವಾಯ ಪಂಚಾಕ್ಷರಿ ಮಂತ್ರ ಪಠಣ

ಇವುಗಳನ್ನು ಜಾತಿಭೇದ ಹಾಗೂ ಲಿಂಗಭೇದವನ್ನು ಮಾಡದೆ ಅನುಪಾಲಿಸಲು ತಿಳಿ ಹೇಳಿದರು

**ಸ್ತ್ರೀಯರಿಗೆ ಸ್ಥಾನಮಾನ**

ಕ್ರಿಸ್ತಶಕ 11 ಹಾಗೂ 12ನೇ ಶತಮಾನದಲ್ಲಿ ಸ್ತ್ರೀಯರಿಗೆ ಉತ್ತಮ ಸ್ಥಾನಮಾನ ದೊರಕಿದ್ದು ಬಸವಣ್ಣನವರ ಅಭೂತಪೂರ್ವ ಸಿದ್ಧಾಂತಗಳ ಮೂಲಕ.ಸ್ತ್ರೀಯರಿಗೆ ಸಿಗಬೇಕಾದ ಉಚಿತ ಸ್ಥಾನಮಾನಗಳ ಅರಿವನ್ನು ಹಾಗೂ ಸ್ತ್ರೀಯ ಮಹತ್ವ ಸ್ತ್ರೀಯ ಶಕ್ತಿಯ ಕುರಿತು ಅಂದ ಸಮಾಜಕ್ಕೆ ತಿಳಿಸಿಕೊಟ್ಟವರು ನಮ್ಮ ಬಸವಣ್ಣ ಅದರ ಫಲವಾಗಿ ಅನುಭವ ಮಂಟಪದಲ್ಲಿದ್ದ ಶಿಕ್ಷಣವಂತ ಶರಣೆಯರಾದ ಅಕ್ಕಮಹಾದೇವಿ,ನೀಲಾಂಬಿಕೆ ಅಂತಹ ಮಹಿಳಾ ವಚನ ಕಾರ್ಯಕರ್ತೆಯರು ಬೆಳಕಿಗೆ ಬಂದರು.

**ದಾಸೋಹ ತತ್ವ**

ಆಗಿನ ಶರಣ ಕೂಟವು ದಾಸೋಹ ತತ್ವವನ್ನು ತಮ್ಮ ಮೂಲ ಮಂತ್ರವನ್ನಾಗಿಸಿಕೊಂಡಿದ್ದರು. ಪ್ರತಿಯೊಬ್ಬರೂ ತಮ್ಮ ಕಾಯಕವನ್ನು ಅತ್ಯಂತ ತೃಪ್ತಿ ಹಾಗೂ ಭಕ್ತಿಯಿಂದ ಮಾಡುತ್ತಿದ್ದು ಪ್ರಸಾದ ದಾಸೋಹವು ಮುಖ್ಯವಾಗಿ "ಸಹ ಭೋಜನದ ಸಿದ್ಧಾಂತವನ್ನು" ಒಳಗೊಂಡಿತ್ತು.

**ಅನುಭವ ಮಂಟಪ**

**ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ**
**ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ /**
**ಮಾಡುವ ನೀಡುವ ನಿಜಗುಣವೆಲ್ಲಡೆ**
**ಕೂಡಿಕೊಂಬ ನಮ್ಮ ಕೂಡಲಸಂಗಮದೇವ //**
**ಮನೆ ನೋಡಾ ಬಡವರು ಮನ ನೋಡಾ ಫಲ**
**ಸೋಂಕಿನಲ್ಲಿ ಶುಚಿ ಸರ್ವಾಂಗ ಕಲಿಗಳು /**
**ಪಸರುಕ್ಕನುವಿಲ್ಲಾ ಬಂದ ತತ್ಕಾಲಕೆ ಉಂಟು**
**ಕೂಡಲಸಂಗನ ಶರಣರು ಸ್ವತಂತ್ರ ಧೀರರು**
**ಕೂಡಲಸಂಗಮ ದೇವ //**

ಎಂದು ಇಂತಹ ಸಾವಿರಾರು ವಚನಾಮೃತಗಳು ಅನುಭವ ಮಂಟಪದ ಮೂಲಕ ಸಮಾಜದ ಓರೆ ಕೋರೆಗಳನ್ನು ತಿದ್ದಿ ಸಮಾಜವನ್ನು ಚಲನ ಸ್ಥಿತಿಗೆ ತರವಲ್ಲಿ ಪ್ರಮುಖ ಪಾತ್ರ ವಹಿಸಿದವು. ತಮ್ಮ ಜೀವನವನ್ನು ಸಮಾಜ ಸುಧಾರಣೆಗಾಗಿ ಮುಡುಪಾಗಿಟ್ಟಿದ್ದ ಕೊನೆಯ ಹಂತದಲ್ಲಿ ಶ್ರೀ ಗುರು ಬಸವಣ್ಣನವರು ಬದಲಾಗದ ಜನರ ನಿಂದನೆಗಳು ಹಾಗೂ ಕ್ರೂರ ಕಾರ್ಯಗಳ ಮೂಲಕ ರೋಸಿ ಹೋಗಿದ್ದು ಶ್ರೀ ಕೂಡಲಸಂಗನ ಅಡಿಯಲ್ಲಿ ಐಕ್ಯರಾಗಲು ನಿರ್ಧರಿಸಿ ತಾವು ಈ ಭೂಮಿಗೆ ಬಂದಂತಹ ಕಾರ್ಯ ಸಂಪನ್ನವಾಯಿತೆಂದು ಎಂದು ತಿಳಿದು ಕ್ರಿ.ಶ,1196 ರಲ್ಲಿ ಸ್ವಯಂ ದೇಹ ತ್ಯಾಗ ಮಾಡಿದರು. ನೂರಾರು ಸಂಕಟಗಳ ಅನುಭವಿಸಿ ಸಾರ್ಥಕ ಜೀವನ ನಡೆಸಿ ನಮಗೆಲ್ಲಾ ಜಗಜ್ಯೋತಿಯಾದ ಕಾಯಕ ಸಂತನಿಗೆ ಸಾಷ್ಟಾಂಗ ನಮಸ್ಕಾರಗಳು.

* * *



– ಅಶ್ವಿನಿ ಅಂಗಡಿ
ಬದಾಮಿ

## "ಬಸವನೆಂಬ ಬೆಳಕು"

ಕಾರಿರುಳಲಿ ಮಬ್ಬು ಕತ್ತಲನು ಸೀಳಿ
12ನೇ ಶತಮಾನದಿ ಪ್ರಜ್ವಲಿಸಿ
ಬೆಳಗಿತೊಂದು ನೇಸರ

ಆವರಿಸಿದ ಮೌಢ್ಯ ಕಂದಾಚಾರಕ್ಕೆ
ವಿನೂತನ ರೀತಿಯ ಕ್ರಾಂತಿ ಮಾಡಿ
ಆದರ್ಶ ಬದುಕಿಗೆ ಬಾಷ್ಯ ಬರೆದ ಭಗವಂತ

ಸರ್ವ ಜನಾಂಗದಲ್ಲಿ ಬೇರೂರಿದ
ಕೀಳರಿಮೆಯ ಕಿತ್ತೊಗೆದು
ಇವ ನಮ್ಮವ ಇವ ನಮ್ಮವ ಎಂದಪ್ಪಿಕೊಂಡ ದಿವ್ಯ ಮಮತೆಯ ಮಡಿಲು

ವಚನವೆಂಬ ಹಣತೆ ಹಿಡಿದು
ಮನೆ ಮನಗಳ ಬೆಳಗಿ ಸುಂದರ ಬದುಕು ಹಸನಾಗಿಸುತ
ಸದ್ಭಕ್ತರ ಮನದ ಮೈಲಿಗೆ ತೊಳೆದು
"ಬಸವನೆಂಬ ಬೆಳಕು" ಚಿರಕಾಲ ಬೆಳಗುತ್ತಿದೆ.

ಕವಿ : ಡಾ. ಜಯವೀರ ಎ. ಕೆ.

# ಸಿದ್ದೇಶ್ವರ ಶಾಲೆಗೆ ಸಂಪತ್‌ಕುಮಾರ ಪ್ರಥಮ



**ತೇರದಾಳ :** ಇಲ್ಲಿನ ಸಿದ್ದೇಶ್ವರ ವಿದ್ಯಾವರ್ಧಕ ಸಂಘದ ಸಿದ್ದೇಶ್ವರ ಪ್ರೌಢಶಾಲೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಂಪತ್‌ಕುಮಾರ ಡುಮ್ಮನವರ ಕನ್ನಡ ವಿಷಯಕ್ಕೆ 125, ಆಂಗ್ಲಭಾಷೆ 99, ಹಿಂದಿ 99, ಗಣಿತ 96, ವಿಜ್ಞಾನ 99 ಹಾಗೂ ಸಮಾಜ ವಿಜ್ಞಾನ ವಿಷಯದಲ್ಲಿ 99 ಅಂಕ ಪಡೆದು (617)98.72ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ. ಅದರಂತೆ ಸೃಷ್ಟಿ ಗೊಂಗಡಿ 595(95.20) ರಷ್ಟು ಅಂಕ ಪಡೆದು ದ್ವಿತೀಯ ಹಾಗೂ ಸುಶ್ಮಿತಾ ಮುಗಳಖೋಡ 592(94.72) ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ.

# ಮಣ್ಣು & ನೀರಿನ ಸಂರಕ್ಷಣೆ ಕುರಿತು ತರಬೇತಿ

**ಬಾಗಲಕೋಟೆ :** ಜಿಲ್ಲಾ ಕೃಷಿ ತರಬೇತಿ ಕೇಂದ್ರದಿಂದ ರೈತರ ಅನುಕೂಲಕ್ಕಾಗಿ ಮೇ 13 ರಂದು ಮಧ್ಯಾಹ್ನ 3.30 ರಿಂದ 4.30 ವರೆಗೆ ಗೂಗಲ್ ಮೀಟ್ ಮೂಲಕ ಮಣ್ಣು ಮತ್ತು ನೀರಿನ ಸಂರಕ್ಷಣೆ ಕುರಿತು ತರಬೇತಿ ಹಮ್ಮಿಕೊಳ್ಳಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತರು ಗೂಗಲ್ ಮೀಟ್ ಲಿಂಕ್ http://meet.google.com/hzk-pchj-wbq ಮೂಲಕ ತರಬೇತಿಗೆ ಹಾಜರಾಗಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೂರ್ಣಪ್ರಜ್ಞ: ಶೇ.99.9 ರಷ್ಟು ಸಾಧನೆ



**ರಬಕವಿ–ಬನಹಟ್ಟಿ :** ಪ್ರಸಕ್ತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಮಪೂರದ ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳು ಶೇ.99.9 ರಷ್ಟು ತೇರ್ಗಡೆ ಹೊಂದಿ ಸಾಧನೆ ಮೆರೆದಿದ್ದಾರೆ.

ಒಟ್ಟು 107 ವಿದ್ಯಾರ್ಥಿಗಳಲ್ಲಿ 106 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಉನ್ನತ ಶ್ರೇಣಿಯಲ್ಲಿ 34, ಪ್ರಥಮ ಶ್ರೇಣಿಯಲ್ಲಿ 60 ಹಾಗು ದ್ವಿತೀಯ ಶ್ರೇಣಿಯಲ್ಲಿ 12 ವಿದ್ಯಾರ್ಥಿಗಳ ತೇರ್ಗಡೆಯಾಗಿದ್ದಾರೆ. ಪ್ರಥಮ ಸ್ಥಾನವನ್ನು ರೋಹಿತ್ ಜಾನಕಿ ಶೇ.98.4 ಅಂಕ ಪಡೆದಿದ್ದಾರೆ. ದ್ವಿತೀಯ ಸ್ಥಾನವನ್ನು ಶ್ರೇಯಸ್ ಸಿಂಘಣ ಶೇ.97.40, ತೃತೀಯ ಸೌಮ್ಯ ಪಾಟೀಲ ಶೇ.96.8 ತೃತಿಯ ಸ್ಥಾನ ಪಡೆದಿದ್ದಾರೆ.

# ಶಾರದಾ ಶಾಲೆಗೆ ಲಕ್ಕಪ್ಪ ಪ್ರಥಮ

**ತೇರದಾಳ :** ಇಲ್ಲಿನ ಹಿಡಕಲ್ ರಸ್ತೆಯ ಶಾಂತಿನಿಕೇತನ ಶಿಕ್ಷಣ ಸಂಸ್ಥೆಯ ಶಾರಾದ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಲಕ್ಕಪ್ಪ ಪ್ರಶಾಂತ ಮರೆಗುದ್ದಿ 603(96.48) ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ. ಪ್ರೀಯಾಂಕ ಚೇತನ ಮಗದುಂ 566(90.56) ದ್ವಿತೀಯ ಹಾಗೂ ಗೌರಿ ಸತೀಶ ಹನಗಂಡಿ 564(90.24) ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ. ಪರೀಕ್ಷೆಗೆ ಹಾಜರಾಗಿದ್ದ



21 ವಿದ್ಯಾರ್ಥಿಗಳ ಪೈಕಿ 19 ವಿದ್ಯಾರ್ಥಿಗಳು ಪಾಸಾಗಿದ್ದು, ಶಾಲೆಯ ಫಲಿತಾಂಶ 90.44ರಷ್ಟು ಆಗಿದೆ.



**ಆಂಗ್ಲ ಮಾಧ್ಯಮ: ತಾಲೂಕಿಗೆ ಪ್ರಥಮ**

**ರಾಮಪೂರದ ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ರೋಹಿತ್ ಶ್ಯಾಮಸುಂದರ ಜಾನಕ್ಕಿ 615 ಅಂಕದೊಂದಿಗೆ ಶೇ.98.4 ಸಾಧನೆ ಮಾಡಿ, ರಬಕವಿ–ಬನಹಟ್ಟಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಕ್ಕೆ ಸಂಸ್ಥೆಯಿಂದ ಸನ್ಮಾನಿಸಿದರು. ರೋಹಿತ್ ಇಂಗ್ಲೀಷ್–122, ಕನ್ನಡ–99, ಹಿಂದಿ–100, ಗಣಿತ–97, ಸಮಾಜ ವಿಜ್ಞಾನ–100, ವಿಜ್ಞಾನ–97 ಅಂಕ ಪಡೆದಿದ್ದಾನೆ.**

# ಕುಂಬಾರಹಳ್ಳ ಸರಕಾರಿ ಶಾಲೆಗೆ ಶೇ. 98.30 ರಷ್ಟು ಫಲಿತಾಂಶ



**ಜಮಖಂಡಿ :** ತಾಲೂಕಿನ ಕುಂಬಾರಹಳ್ಳ ಸರಕಾರಿ ಪ್ರೌಢ ಶಾಲೆ ವಿದ್ಯಾರ್ಥಿಗಳು ಎಸ್‌ಎಸ್‌ಎಲ್.ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಯೊಂದಿಗೆ ಶೇ.98.30 ರಷ್ಟು ಪಡೆದುಕೊಂಡಿದೆ,

ವಿದ್ಯಾರ್ಥಿಗಳಾದ ಪುಷ್ಪಾ ನಾಗಪ್ಪ ಹುದಲಿ 625ಕ್ಕೆ 606 ಅಂಕ, ಸವಿತಾ ಕಲ್ಲಪ್ಪ ಮಟ್ಟಿ 603, ಸದಾಶಿವ ಶ್ರೀಶೈಲ ಸೊನ್ನದ 592, ಸಿಂಚನಾ ಮಹಾದೇವ ಪಾಟೀಲ 589 ಸಹಿತ ಇನ್ನೂ 6 ವಿದ್ಯಾರ್ಥಿಗಳು ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದುಕೊಂಡಿದ್ದಾರೆ.

ಪರೀಕ್ಷೆಯಲ್ಲಿ ಕುಳಿತ 59 ವಿದ್ಯಾರ್ಥಿಗಳಲ್ಲಿ 10 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, 25 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 14 ವಿದ್ಯಾರ್ಥಿಗಳು ದ್ವಿತಿಯ ಶ್ರೇಣಿ, 09 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಕನ್ನಡ ವಿಷಯದಲ್ಲಿ 3, ಹಿಂದಿ ವಿಷಯದಲ್ಲಿ ಓರ್ವ ವಿದ್ಯಾರ್ಥಿ ನೂರಕ್ಕೆ ನೂರು ಅಂಕ ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸನ್ನವರ, ಕ್ಷೇತ್ರ ಸಮನ್ವಯಾಧಿಕಾರಿ ರಮೇಶ ಅವಟಿ, ಮುಖ್ಯಶಿಕ್ಷಕ ನಾರಾಯಣ ಶಾಸ್ತ್ರಿ, ಶಿಕ್ಷಕರಾದ ಸಂಜೀವ ಝುಂಬುರೆ, ಸಂಗನಬಸವ ಉಟಗಿ, ಆಶೀಪಾಬಾನು ಮೋಮಿನ, ಬಾಹುಬಲಿ ಮುತ್ತೂರ, ಸವಿತಾ ಬೆನಕಟ್ಟಿ, ಶಕುಂತಲಾ ಬಿರಾದಾರ, ಚಂದ್ರಕಾಂತ ಪೋಲಿಸ, ಗ್ರಾಮ ಪಂಚಾಯತ, ಪಿಕೆಪಿಎಸ್, ಹಾಲು ಉತ್ಪಾದಕ ಮಂಡಳಿ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಅಭಿನಂದಿಸಿದ್ದಾರೆ.

# ಪಟ್ಟಣ ಶಾಲೆ ಫಲಿತಾಂಶ ಪ್ರತಿಶತ 91%




**ರಬಕವಿ–ಬನಹಟ್ಟಿ :** ರಬಕವಿಯ ಎಂ.ವ್ಹಿ.ಪಟ್ಟಣ ಸಂಯುಕ್ತ ಪ.ಪೂ.ಮಹಾವಿದ್ಯಾಲಯದ ಪ್ರೌಢಶಾಲಾ ವಿಭಾಗದ ಎಸ್.ಎಸ್.ಎಲ್.ಸಿ. ಫಲಿತಾಂಶ ಪ್ರತಿಶತ 91 ರಷ್ಟಾಗಿರುತ್ತದೆ. ಕು ಚೇತನ ಸೋಮಶೇಖರ ಬೂಯಾರ ಈತನ್ನು 625 ಪೈಕಿ 592 ರಷ್ಟು ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಕುಮಾರ ಸಂತೋಷ ಕಾಶಪ್ಪ ರಾಮದುರ್ಗ ಈತನಯ 542 ಅಂಕ ಪಡೆದು ದ್ವತೀಯ ಸ್ಥಾನ ಪಡೆದಿದ್ದಾನೆ. ಕುಮಾರ ಚೇತನ ಬೀರಪ್ಪ ದೇವಕತೆ ಈತನು 440 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾನೆ.

ಹೆಚ್ಚು ಅಂಕ ಪಡೆದು ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಆಡಳಿತ ಮಂಡಳಿ, ಮುಖ್ಯಗುರುಗಳು ಮತ್ತು ಸಿಬ್ಬಂದಿ ಅಭಿನಂದಿಸಿದ್ದಾರೆ.

# ಕೊಟ್ರಶೆಟ್ಟಿ ಆಂಗ್ಲಮಾಧ್ಯಮ: ಶೇ.87 ರಷ್ಟು ಸಾಧನೆ

**ರಬಕವಿ–ಬನಹಟ್ಟಿ :** ಪ್ರಸಕ್ತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಬಕವಿಯ ಡಿ.ಕೆ. ಕೊಟ್ರಶೆಟ್ಟಿ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳು ಶೇ.87 ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಒಟ್ಟು 31 ವಿದ್ಯಾರ್ಥಿಗಳಲ್ಲಿ 27 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಉನ್ನತ ಶ್ರೇಣಿಯಲ್ಲಿ 08, ಪ್ರಥಮ ಶ್ರೇಣಿಯಲ್ಲಿ 13 ಹಾಗು ದ್ವಿತೀಯ ಶ್ರೇಣಿಯಲ್ಲಿ 04 ವಿದ್ಯಾರ್ಥಿಗಳ ತೇರ್ಗಡೆಯಾಗಿದ್ದಾರೆ.

ಪ್ರಥಮ ಸ್ಥಾನವನ್ನು ಸಾಕ್ಷಿ ಚಿತ್ತರಗಿ ಶೇ.97.6 ಅಂಕ ಪಡೆದಿದ್ದಾರೆ. ದ್ವಿತೀಯ ಸ್ಥಾನವನ್ನು ಹಂಸಿಕಾ ಜಾಧವ ಶೇ.94.08, ತೃತೀಯ ವೇದಶ್ರೀ ವಂದಾಲ ಶೇ.93.8 ತೃತಿಯ ಸ್ಥಾನ ಪಡೆದಿದ್ದಾರೆ.

# 24ವರ್ಷದ ನಂತರ ಹೊಸ ಇತಿಹಾಸ ಬರೆದ ಕ್ಷೇತ್ರ ಶಿಕ್ಷಣಾಧಿಕಾರಿಗಳು

# ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಜಮಖಂಡಿ ಜಿಲ್ಲೆಗೆ ಪ್ರಥಮ

**ಜಮಖಂಡಿ :** ಕಳೆದ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.75.05 ರಷ್ಟು ಪಡೆದುಕೊಂಡಿದ್ದ ಜಮಖಂಡಿ ತಾಲೂಕ 2023–24ನೇ ಸಾಲಿನಲ್ಲಿ ಶೇ. 83.37 ರಷ್ಟು ಫಲಿತಾಂಶ ಪಡೆದುಕೊಳ್ಳುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದೆ. ಕಳೆದ 24 ವರ್ಷಗಳ ನಂತರ ಮತ್ತೋಮ್ಮೆ ಜಮಖಂಡಿ ತಾಲೂಕ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮಸ್ಥಾನ ಪಡೆದುಕೊಂಡಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸನ್ನವರ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಬಕವಿ–ಬನಹಟ್ಟಿ ಮತ್ತು ಜಮಖಂಡಿ ತಾಲೂಕಿನ ಅವಳಿ ತಾಲೂಕಿನಲ್ಲಿ 3646 ವಿದ್ಯಾರ್ಥಿ ಮತ್ತು 4079 ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 7725 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅದರಲ್ಲಿ 2798 ವಿದ್ಯಾರ್ಥಿ 3642 ವಿದ್ಯಾರ್ಥಿನಿಯರು



ಸೇರಿದಂತೆ ಒಟ್ಟು 6440 ವಿದ್ಯಾರ್ಥಿಗಳು ಉತ್ತೀರ್ಣರಾಗವ ಮೂಲಕ ತಾಲೂಕಿನ ಫಲಿತಾಂಶ ಶೇ.83.37 ರಷ್ಟು ಆಗಿದೆ ಎಂದರು.

ಟಕ್ಕಳಕಿ ಸರಕಾರಿ ಪ್ರೌಢ ಶಾಲೆ, ಜಂಬಗಿ ಬಿ.ಕೆ. ಸರಕಾರಿ ಪ್ರೌಢ ಶಾಲೆ, ತುಬಚಿ ಸರಕಾರಿ ಪ್ರೌಢ ಶಾಲೆ, ಸಾವಳಗಿಯ ಬನಶಂಕರಿ ಪಬ್ಲಿಕ್ ಶಾಲೆ, ನಗರದ ಕಿವುಡು ಮತ್ತು ಮೂಕ ಮಕ್ಕಳ ಶಾಲೆ, ಸಿ.ವ್ಹಿ ರಾಮನ್ ಪ್ರೌಢ ಶಾಲೆ, ವಿಶ್ವೇಶ್ವರಯ್ಯ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ತುಂಗಳ ಆಂಗ್ಲ ಮತ್ತು ಕನ್ನಡ ಮಾಧ್ಯಮ ಪ್ರೌಢ ಶಾಲೆಗಳು ಶೇ. ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದುಕೊಂಡಿವೆ ಎಂದರು.

ನಗರದ ತುಂಗಳ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ವಿದ್ಯಾರ್ಥಿನಿ ದೀಪಾ ಸಜ್ಜನ 619 ಅಂಕಗಳೊಂದಿಗೆ ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಬನಹಟ್ಟಿಯ ಎಸ್.ಆರ್.ಎ ಪ್ರೌಢ ಶಾಲೆ ವಿದ್ಯಾರ್ಥಿನಿ ಸೌಂದರ್ಯ ಸಿದ್ದು ಮಾಳಿ, ಜಮಖಂಡಿಯ ಡಾ. ಎಪಿಜೆ ಅಬ್ದುಲ ಕಲಾಂ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ವಿದ್ಯಾರ್ಥಿನಿ ಜಿಶಾನ ಪಠಾಣ 618 ಅಂಕ ಪಡೆದು ತಾಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಬನಹಟ್ಟಿಯ ಎಸ್.ಆರ್.ಎ ಪ್ರೌಢ ಶಾಲೆ ವಿದ್ಯಾರ್ಥಿನಿ ಪವಿತ್ರಾ ಶಿವಾನಂದ ಮಠದ, ತೇರದಾಳ ಸಿದ್ದೇಶ್ವರ ಪ್ರೌಢ ಶಾಲೆ ವಿದ್ಯಾರ್ಥಿ ಸಂಪತ್ತಕುಮಾರ ಅನೀಲ ಡುಮ್ಮಣ್ಣವರ 617 ಅಂಕಗಳೊಂದಿಗೆ ತಾಲೂಕಿಗೆ ತೃತೀಯ ಸ್ಥಾನ ಪಡೆದಿದ್ದಾರೆ ಎಂದರು.

ಫಲಿತಾಂಶ ಸುಧಾರಣೆಗಾಗಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ ನಾನೂ ಪಾಸಾಗುವೆ ಅಭಿಯಾನ, ನಮ್ಮ ಚಿತ್ತ ಶತಕದತ್ತ, ಕಲಿಕೆಯಲ್ಲಿ ಮುಂದುವರೆದ ಮಕ್ಕಳಿಗಾಗಿ ಥಿಂಕ್ ಬಿಗ್, ಪರಸ್ಪರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ, ಪರೀಕ್ಷೆ ಒಂದು ಹಬ್ಬ ಸಂಭ್ರಮಿಸು, ಶೈಕ್ಷಣಿಕ ಮೌಲ್ಯಮಾಪನ, ವಿದ್ಯಾರ್ಥಿವಾರು ಕೆಂಪು, ನೀಲಿ ಹಾಗೂ ಹಸಿರು ಗುಂಪು ರಚನೆ, ಹಾಜರಾತಿ ಉತ್ತಮ ಪಡಿಸುವದು. ಫಲಿತಾಂಶಮುಖಿ ಗ್ರಂಥಾಲಯ, ತಂತ್ರಜ್ಞಾನ ಬಳಕೆ, ಅಮ್ಮಂದಿರ ಸಭೆ, ಫೋನ ಇನ್ ಮಕ್ಕಳ ಸಹಾಯವಾಣಿ ಕಾರ್ಯಕ್ರಮ ಮಕ್ಕಳಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು ಎಂದರು.

# ಎಸ್‌ಆರ್‌ಎ ಹೈಸ್ಕೂಲ್: ಶೇ.93.19 ರಷ್ಟು ಸಾಧನೆ



**ರಬಕವಿ–ಬನಹಟ್ಟಿ :** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬನಹಟ್ಟಿಯ ಎಸ್‌ಆರ್‌ಎ ಪ್ರೌಢಶಾಲೆ ಶೇ.93.19 ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಒಟ್ಟು 294 ವಿದ್ಯಾರ್ಥಿಗಳಲ್ಲಿ 274 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಉನ್ನತ ಶ್ರೇಣಿಯಲ್ಲಿ 60, ಪ್ರಥಮ ಶ್ರೇಣಿಯಲ್ಲಿ 127 ಹಾಗು ದ್ವಿತೀಯ ಶ್ರೇಣಿಯಲ್ಲಿ 59 ಹಾಗು ತೃತಿಯ ಸ್ಥಾನದಲಲಿ 28 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಪ್ರಥಮ ಸ್ಥಾನವನ್ನು ಸೌಂದರ್ಯ ಮಾಳಿ ಶೇ.98.88 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ದ್ವಿತೀಯ ಸ್ಥಾನವನ್ನು ಪವಿತ್ರಾ ಮಠದ ಶೇ.98.72 ಅಂಕ ಹಾಗು ತೃತಿಯ ಸ್ಥಾನವನ್ನು ಶ್ರುತಿ ಮಟಕೆ ಶೇ.98.4 ಅಂಕ ಪಡೆದು ಸಾಧನೆ ಮಾಡಿದ್ದಾರೆ.



## ಜಿಲ್ಲಾ ಚುನಾವಣಾ ವೀಕ್ಷಕರ ಭೇಟಿ

**ಮಹಾಲಿಂಗಪುರ: ಪಟ್ಟಣದ ಪುರಸಭೆಯಲ್ಲಿ ಸ್ಥಾಪಿಸಿದ್ದ 205, 207 ಮತಗಟ್ಟೆಗಳಿಗೆ ಹಾಗೂ ಸಮೀಪದ ಚಿಮ್ಮಡ ಗ್ರಾಮದ ಸರಕಾರಿ ಪ್ರೌಢಶಾಲೆಯ ಮತಗಟ್ಟೆಗೆ ಜಿಲ್ಲಾ ಚುನಾವಣಾ ವೀಕ್ಷಕ ಇ.ಸರವಣ್ಣೇಲರಾಜ್ (ಐ.ಎ.ಎಸ್) ಭೇಟಿ ನೀಡಿ ಮತದಾನದ ಮಾಹಿತಿ ಪಡೆದರು.**




## ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮತದಾನ

**ಮಹಾಲಿಂಗಪುರ: ಕೆಪಿಸಿಸಿ ಕಿಸಾನ ಘಟಕದ ರಾಜ್ಯ ಸಂಚಾಲಕರು, ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಕುಟುಂಬ ಸಮೇತ ಮಹಾಲಿಂಗಪುರ ಕೆಎಲ್ಇ ಕಾಲೇಜಿನ 198ರ ಮತಗಟ್ಟೆಯಲ್ಲಿ ಕುಟುಂಬ ಸಮೇತ ಮತ ಚಲಾಯಿಸಿದರು.**



## ಚುನಾವಣೆ ಜಿಲ್ಲಾ ಮಹಿಳಾ ವಿಭಾಗದ ಮುಖ್ಯಸ್ಥೆ ಡಾ. ತುಂಗಳ ಮತದಾನ

**ಜಮಖಂಡಿ: ನಗರದ ಸರಕಾರಿ ಪ್ರಾಥಮಿಕ ಶಾಲೆಯ ಮತಗಟ್ಟೆ 131 ರಲ್ಲಿ ಲೋಕಸಭಾ ಚುನಾವಣೆಯ ಜಿಲ್ಲಾ ಮಹಿಳಾ ವಿಭಾಗದ ಮುಖ್ಯಸ್ಥೆ ಸ್ತ್ರೀರೋಗ ತಜ್ಞೆ ಡಾ. ವಿಜಯಲಕ್ಷ್ಮೀ ತುಂಗಳ ಮತ ಚಲಾಯಿಸಿದರು.**

# ರಾಣಾ ಪ್ರತಾಪ 90 ಕೀಲೋ ತೂಕದ ಖಡ್ಗ ಬಳೆಸುತ್ತಿದ್ದ: ದಶರಥ್‌ಸಿಂಗ್



**ತಾಳಿಕೋಟೆ :** ಮಹಾ ರಾಣಾಪ್ರತಾಪಸಿಂಹ್ ಅವರು ವಾಯುವ್ಯ ಭಾರತದ ರಾಜ್ಯವಾದ ಮೇವಾರವನ್ನು ಆಳುತ್ತಿದ್ದ ಅವರು ರಜಪೂತರ ವಂಶಕ್ಕೆ ಸೇರಿದವರಾಗಿದ್ದರಲ್ಲದೇ ತೀಕ್ಷಣ ಸ್ವಭಾವ ಹೊಂದಿದ್ದ ರಜಪೂತರ ಹೆಮ್ಮೆಯ ಮತ್ತು ಆತ್ಮಗೌರವದಸಾಕಾರರೂಪವಾಗಿದ್ದರೆಂದು ಸ್ಥಳೀಯ ರಜಪೂತ ಸಮಾಜದ ಹಿರಿಯ ಪುರಸಭಾ ಮಾಜಿ ಅಧ್ಯಕ್ಷರಾದ ದಶರಥ್‌ಸಿಂಗ್ ಮನಗೂಳಿ ಅವರು ಹೇಳಿದರು.

ಗುರುವಾರರಂದು ಸ್ಥಳೀಯ ರಜಪೂತ ಸಮಾಜ ಬಾಂದವರ ವತಿಯಿಂದ ಮಹಾರಾಣಾ ಪ್ರತಾಪಸಿಂಹ್ ಅವರ ಜಯಂತ್ಯೋತ್ಸವಅಂಗವಾಗಿಮಹಾರಾಣಾ ಪ್ರತಾಪಸಿಂಹ್ ಸರ್ಕಲ್‌ದಲ್ಲಿ ಮಹಾರಾಣಾ ಪ್ರತಾಪಸಿಂಹ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಏರ್ಪಡಿಸಲಾದ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಮಾತನಾಡುತ್ತಿದ್ದ ಅವರು ತೀಕ್ಷಣ ಸ್ವಭಾವದ ರಜಪೂತರ ಹೆಮ್ಮೆಯ ಅಲ್ಲದೇ ಆತ್ಮ ಗೌರವದವರಾದ ಪ್ರತಾಪಸಿಂಹ್ ಅವರು ಶತಮಾನಗಳ ವರೆಗೆ ರಜಪೂತರ ಮಹಾತ್ವಾಕಾಂಕ್ಷೆಯ ಗುಣಗಳಿಗೆ ದ್ರುಷ್ಟಾಂತವಾಗಿದ್ದರೆಂದರು. ದೇಶಕ್ಕಾಗಿ ಜೀವನ ಉದ್ದಕ್ಕೂ ಹೋರಾಟ ನಡೆಸಿದ ರಾಣಾಪ್ರತಾಪಸಿಂಹ್ ಅವರು ತಂದೆ ಉದಯಸಿಂಗ್ ಅವರ ಮಾರ್ಗದರ್ಶನದೊಂದಿಗೆ ಹೋರಾಟ ನಡೆಸಿದ ಮಹಾರಾಜರಾಗಿದ್ದರು ಹಿಂದೂ ಧರ್ಮದ ಬಗ್ಗೆ ಬಹಳೇ ಕಾಳಜಿ ಹೊಂದಿದ್ದರೆಂದರು. ಯುದ್ದದ ಹೋರಾಟಕ್ಕಾಗಿ ಮುಂದೆ ಬಂದ ಎದುರಾಳಿಯ ಕೈಯಲ್ಲಿ ಖಡ್ಗವಿಲ್ಲದಿದ್ದರೂ ಅವರಿಗೆ ತನ್ನಲ್ಲಿಯ ಖಡ್ಗವನ್ನು ನೀಡಿ ಭಯಹುಟ್ಟಿಸುತ್ತಿದ್ದರಲ್ಲದೇ ತಾನೂ ಸಹ ಎರಡನೇಯ ಖಡ್ಗವನ್ನು ಬಳೆಸಿ ಮಹಾರಾಣಾಪ್ರತಾಪ ಸಿಂಹ್ ಅವರು ತನ್ನ ಭಾರ ಎತ್ತುವ ಸಾಮರ್ಥ್ಯದಿಂದ ಸುಮಾರು 90 ಕೀಲೋ ಭಾರದ ಖಡ್ಗಗಳನ್ನು ಹಿಡಿದು ಹೋರಾಟ ಮಾಡುತ್ತಿದ್ದ ಅಂತಹ ಶೂರ ದೀರರವಂಶದಲ್ಲಿ ಜನ್ಮತಾಳಿದನಾವೆಲ್ಲರೂ ದೇಶದ ರಕ್ಷಣೆಗಾಗಿ ಪಣತೊಡೋಣ ಇಂದು ಅವರ ಜಯಂತ್ಯೋತ್ಸವ ದಿನದಂದು ಎಲ್ಲರೂ ಪ್ರಾಮಾಣಿಕತನದಿಂದ ಅವರ ಮಾರ್ಗದತ್ತ ಸಾಗಿ ದೇಶದ ಇತಿಹಾಸ ಕಾಪಾಡೋಣವೆಂದರು.

ಮಹಾರಾಣಾಪ್ರತಾಪ ಸಿಂಹ್ ಸರ್ಕಲ್‌ದಿಂದ ಪ್ರಾರಂಭಗೊಂಡ ಬೈಕ್ ರ‍್ಯಾಲಿಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರಜಪೂತ ಸಮಾಜದ ಶ್ರೀ ಅಂಬಾಭವಾನಿ ಮಂದಿರಕ್ಕೆ ತಲುಪಿ ಶ್ರೀ ದೇವಿಯ ಮಹಾ ಪ್ರಸಾದದೊಂದಿಗೆ ಮಂಗಲಗೊಂಡಿತು.

ಈ ಉತ್ಸವದ ನೇತೃತ್ವವನ್ನು ರಜಪೂತ ಸಮಾಜದ ಅಧ್ಯಕ್ಷರಾದ ಹರೀಸಿಂಗ್ ಮೂಲಿಮನಿ, ಉಪಾಧ್ಯಕ್ಷ ರತನಸಿಂಗ್ ಕೊಕಟನೂರ, ಸುರೇಶ ಹಜೇರಿ, ರಘುವೀರಸಿಂಗ್ ಹಜೇರಿ, ಬಾಬುಸಿಂಗ್ ಹಜೇರಿ, ಅಮಿತಸಿಂಗ್ ಮನಗೂಳಿ, ಗೋವಿಂದಸಿಂಗ್ ಹಜೇರಿ, ಮಾನಸಿಂಗ್ ಕೊಕಟನೂರ, ಗೋವಿಂದಸಿಂಗ್ ಮೂಲಿಮನಿ, ಕೇಸರಸಿಂಗ್ ಹಜೇರಿ, ಸುರೇಶಕುಮಾರ ಹಜೇರಿ, ವಿಠ್ಠಲಸಿಂಗ್ ಹಜೇರಿ, ನೀತೀನ ವಿಜಾಪೂರ, ರಮೇಶ ಗೌಡಗೇರಿ, ಅವರನ್ನೊಳಗೊಂಡು ರಜಪೂತ ಸಮಾಜದ ಯುವಕ ಮಂಡಳಿ ಹಾಗೂ ಅಭಿಮಾನಿಗಳು ಮತ್ತು ಸಮಾಜ ಬಾಂದವರು ವಹಿಸಿದ್ದರು.

# ಮತದಾರರಿಗೆ, ಕಾರ್ಯಕರ್ತರಿಗೆ, ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್: ಕಾಂಗ್ರೆಸ್ ಗೆಲುವಿನ ವಿಶ್ವಾಸ



**ಬೆಳಗಾವಿ :** ಕಳೆದ ಸುಮಾರು 2 ತಿಂಗಳ ಕಾಲ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಎಲ್ಲ ಮುಖಂಡರಿಗೆ, ಕಾರ್ಯಕರ್ತರಿಗೆ ಮತ್ತು ಮತದಾನ ಮಾಡಿದ ನಾಗರಿಕರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹಾಗೂ ಬೆಳಗಾವಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಮೃಣಾಲ ಹೆಬ್ಬಾಳಕರ್ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಕುರಿತು ಅವರು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಚುನಾವಣೆ ಕೆಲಸದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲ ಮುಖಂಡರು, ಕಾರ್ಯಕರ್ತರು ಸಂಪೂರ್ಣವಾಗಿ ತೊಡಗಿಸಿಕೊಂಡು, ಹಗಲು, ರಾತ್ರಿ ಕೆಲಸ ಮಾಡಿದ್ದಾರೆ. ಇದರಿಂದಾಗಿ ನಮ್ಮ ಪ್ರಚಾರ ಕಾರ್ಯಕರ್ಮಗಳು ಸೇರಿದಂತೆ ಸಂಪೂರ್ಣ ಚುನಾವಣೆ ಪ್ರಕ್ರಿಯೆ ಅತ್ಯಂತ ವ್ಯವಸ್ಥಿತವಾಗಿ ನಡೆಯಲು ಸಾಧ್ಯವಾಗಿದೆ. ಹಾಗಾಗಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ ಎಂದು ತಿಳಿಸಿದ್ದಾರೆ.

ಜೊತೆಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ಕಲ್ಪಿಸದ ಅತ್ಯಂತ ಸಾಂತಿಯುತವಾಗಿ ಮತದಾನ ಮಾಡಿದ ಎಲ್ಲ ನಾಗರಿಕರಿಗೆ, ಇಡೀ ಪ್ರಕ್ರಿಯೆಯನ್ನು ಜವಾಬ್ದಾರಿಯಿಂದ, ವ್ಯವಸ್ಥಿತವಾಗಿ ನಿರ್ವಹಿಸಿದ ಎಲ್ಲ ಅಧಿಕಾರಿಗಳು, ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

ಪ್ರಜಾಪ್ರಭುತ್ವ ಹಬ್ಬದ ದಿನವಾದ ಇಂದು ಯಾವುದೇ ಅಹಿತಕರ ಘಟನೆ ನಡೆಯದೆ, ಕ್ಷೇತ್ರದಾದ್ಯಂತ ಸುಗಮವಾಗಿ ಮತದಾನ ನಡೆದಿದ್ದು, ಇದಕ್ಕೆ ಪ್ರಮುಖ ಪಾತ್ರವಹಿಸಿದ ಪೊಲೀಸ್ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ್ ಪರ ಹಗಲಿರುಳು ಶ್ರಮಿಸಿದ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಸದಾ ಅಭಾರಿಯಾಗಿರುತ್ತೇನೆ. ನಿಮ್ಮೆಲ್ಲರ ಉತ್ಸಾಹ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದು, ಹೆಚ್ಚು ಕೆಲಸ ಮಾಡಲು ಸ್ಫೂರ್ತಿ ತುಂಬಿದೆ ಎಂದು ಸಚಿವರು ತಿಳಿಸಿದ್ದಾರೆ.

**ಕಾಂಗ್ರೆಸ್ ಗೆಲುವು ನಿಶ್ಚಿತ :**

ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷದ ಗೆಲುವು ಗ್ಯಾರಂಟಿ. ಕಳೆದ ಒಂದೂವರೆ ತಿಂಗಳ ಕಾರ್ಯಕರ್ತರ ಶ್ರಮಕ್ಕೆ ಬೆಲೆ ಸಿಗಲಿದೆ. ಪಕ್ಷದ ಕಾರ್ಯಕರ್ತರು, ಮುಖಂಡರು ಹಗಲಿರುಳು ಶ್ರಮ ಹಾಕಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ್ದಾರೆ. ಎಲ್ಲಾ ವರ್ಗದ, ಎಲ್ಲಾ ಸಮುದಾಯದವರನ್ನು ನಾವು ತಲುಪಿದ್ದೇವೆ. ಒಂದು ಲಕ್ಷಕ್ಕೂ ಅಧಿಕ ಮತಗಳಿಂದ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ್ ಗೆಲುವು ದಾಖಲಿಸಲಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ವಿಶ್ವಾಸ ವ್ಯಕ್ತಪಡಿಸಿದರು.

ಬೆಳಗಾವಿಯ ವಿಜಯನಗರದ ಸರ್ಕಾರಿ ಮರಾಠಿ ಪ್ರಾಥಮಿಕ ಶಾಲೆಯಲ್ಲಿ ಕುಟುಂಬ ಸದಸ್ಯರೊಂದಿಗೆ ಬೆಳಗ್ಗೆ 8 ಗಂಟೆ ವೇಳೆಗೆ ಆಗಮಿಸಿ ಮತದಾನ ಮಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು, ಬಳಿಕ ಬೆಳಗಾವಿ ಗ್ರಾಮೀಣ, ಬೆಳಗಾವಿ ದಕ್ಷಿಣ, ಬೈಲಹೊಂಗಲ ಕ್ಷೇತ್ರಗಳ ವ್ಯಾಪ್ತಿಯ ಕೆಲ ಮತಗಟ್ಟೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದು-ಕೊಂಡರು. ಅಲ್ಲದೆ, ಯಾವುದೇ ಅಹಿತಕರ ಘಟನೆ ನಡೆ-ಯದಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸುವಂತೆ ಕಾರ್ಯಕರ್ತರಿಗೆ ಕಿವಿ ಮಾತು ಹೇಳಿದರು.

# ಸಿದ್ದಾಪೂರ ಪುಷ್ಪಾತಾಯಿ ಪ್ರೌಢಶಾಲೆ ಶೇ.93ರಷ್ಟು ಫಲಿತಾಂಶ



**ಜಮಖಂಡಿ:** ತಾಲೂಕಿನ ಸಿದ್ದಾಪೂರ ಗ್ರಾಮದ ಪ್ರಭುಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪುಷ್ಪಾತಾಯಿ ಕನ್ನಡಮಾಧ್ಯಮ ಪ್ರೌಢ ಶಾಲೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶಾಲೆಗೆ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದುಶೇ.93ರಷ್ಟುಫಲಿತಾಂಶ ಪಡೆದುಕೊಂಡಿದೆ. ವಿದ್ಯಾರ್ಥಿಗಳಾದ ಶಶಿಕುಮಾರ ಬಾರಿಕಾಯಿ 601 ಅಂಕ, ಅಮೃತಾ ಚಿಂಚಲಿ 600 ಅಂಕ, ಸಂಜನಾ ರಾಮಗೊಂಡ 590 ಅಂಕ ಪಡೆದುಕೊಂಡಿದ್ದಾರೆ. ಕನ್ನಡ ವಿಷಯದಲ್ಲಿ 4 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಜಗದೀಶ ಗುಡಗುಂಟಿ, ಪ್ರಾಚಾರ್ಯ ಪ್ರೋ.ವೈ.ಬಿ.ಹೊಟ್ಟಿ, ಶಾಲಾ ನಿರ್ದೇಶಕ ಡಾ.ಎಸ್.ಎಸ್.ಹೂಲಿ, ಮುಖ್ಯಶಿಕ್ಷಕ ಕೆ.ವೈ.ಭೂತಾಳಿ ಸಹಿತ ಶಿಕ್ಷಕರ ವೃಂದ ಮತ್ತು ಸಂಸ್ಥೆ ಆಡಳಿತ ಮಂಡಳಿ ಸದಸ್ಯರು ಅಭಿನಂದಿಸಿದ್ದಾರೆ.

# ಅದ್ದೂರಿಯಾಗಿ ಜರುಗಿದ ಆದಿ ಬಸವೇಶ್ವರ ಜಾತ್ರಾ ಮಹೋತ್ಸವ



**ಕವಿತಾಳ :** ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಪಾಮನಕಲ್ಲೂರು ಗ್ರಾಮದ ಹೊರವಲಯದಲ್ಲಿರುವ ಶ್ರೀ ಆದಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಆದಿ ಬಸವೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮವು ಶುಕ್ರವಾರ ಸಡಗರ ಸಂಭ್ರಮದಿಂದ ಅದ್ದೂರಯಾಗಿ ನಡೆಯಿತು.

ಪ್ರತಿ ವರ್ಷ ಬಸವ ಜಯಂತಿಯಂದು ನಡೆಯುವಂತೆ ಈ ವರ್ಷವೂ ಬಸವ ಜಯಂತಿ ದಿನವಾದ ಶುಕ್ರವಾರ ಬೆಳಗ್ಗೆಯಿಂದ ಆರಂಭವಾದ ಜಾತ್ರಾ ಮಹೋತ್ಸವ ಕಾರ್ಯಕ್ರಮವು ಸಂಜೆ ರಥೋತ್ಸವ ಮತ್ತು ಉಚ್ಚಯ್ಯಗಳೊಂದಿಗೆ ಮುಕ್ತಾಯವಾಯಿತು.

*ಆದಿ ಬಸವೇಶ್ವರನ ಸನ್ನಿಧಿಯಲ್ಲಿ ನವಜೀವನಕ್ಕೆ ಕಾಲಿಟ್ಟ ನವಜೋಡಿಗಳು:*

ಶ್ರೀ ಆದಿ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಜರುಗಿದವು. ಅನೇಕ ಜನ ನವಜೋಡಿಗಳು ಆದಿ ಬಸವೇಶ್ವರ ದೇವರ ಸನ್ನಿಧಿಯಲ್ಲಿ ಮಲದಗುಡ್ಡದ ಶ್ರೀಗಳು, ಮುಡಲಗುಂಡದ ಶ್ರೀಗಳ ಆಶೀರ್ವಾದದೊಂದಿಗೆ ನವಜೀವನಕ್ಕೆ ಕಾಲಿಟ್ಟರು.

*ಪ್ರಸಾದ ವ್ಯವಸ್ಥೆ:*

ಜಾತ್ರೆಗೆ ಆಗಮಿಸುವ ಭಕ್ತರಿಗೆ ಪ್ರತಿ ವರ್ಷವೂ ಆದಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಅದರಂತೆಯೇ ಈ ವರ್ಷವೂ ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು.

*ರಥ, ಉಚ್ಚಯ್ಯ ಎಳೆದು ಭಕ್ತಿ ಸಮರ್ಪಿಸಿದ ಭಕ್ತರು:*

ಆದಿ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಸಂಜೆ ನಡೆದ ರಥೋತ್ಸವ ಮತ್ತು ಉಚ್ಚಯ್ಯ ಕಾರ್ಯಕ್ರಮದಲ್ಲಿ ಜಾತ್ರೆಗೆ ಆಮಿಸಿದ ಭಕ್ತರು ರಥ ಮತ್ತು ಉಚ್ಚಯ್ಯ ಎಳೆದು ಭಕ್ತಿ ಸಮರ್ಪಿಸಿದರು. ಇನ್ನೂ ಈ ವರ್ಷ ಆದಿ ಬಸವೇಶ್ವರ ರಥಕ್ಕೆ ಲೈಟಿಂಗ್ ವ್ಯವಸ್ಥೆ ಮಾಡಿ ರಥೋತ್ಸವ ಕಾರ್ಯಕ್ರಮಕ್ಕೆ ಯುವ ಸಮುದಾಯ ಮೆರುಗ ತಂದಿತ್ತು.

*ಸಂಜೆಯಾಗುತ್ತಿದ್ದಂತೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ ಭಕ್ತರು:*

ಆದಿ ಬಸವೇಶ್ವರ ಜಾತ್ರೆಯೂ ಗ್ರಾಮದಲ್ಲಿ ನಡೆಯುವ ಜಾತ್ರೆಗಳಲ್ಲಿ ವಿಶೇಷ ಜಾತ್ರೆಯಾಗಿದ್ದು, ಸಂಜೆ-ಯಾಗುತ್ತಿದ್ದಂತೆ ರಥೋತ್ಸವ ಕಾರ್ಯಕ್ರಮದ ಸಮಯಕ್ಕೆ ಪಾಮನಕಲ್ಲೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ರಥೋತ್ಸವ ಕಾರ್ಯಕ್ರಮವನ್ನು ಕಣ್ತುಂಬಿಕೊಂಡರು.

# ಬಹುಮುಖ ಪ್ರತಿಭೆ ಸಾಹಿತ್ಯಗೆ ಎಸ್.ಎಸ್.ಎಲ್.ಸಿಯಲ್ಲಿ ಶೇ. 93.92 ಅಂಕ



**ಕೊಪ್ಪಳ :** ಇಲ್ಲಿನ ನಿವಾಸಿ, ಪತ್ರಕರ್ತ ಮಂಜುನಾಥ ಗೊಂಡಬಾಳ ಮತ್ತು ಮಹಿಳಾ ಕಾಂಗ್ರೆಸ್ ಮುಖಂಡೆ ಜ್ಯೋತಿ ಗೊಂಡಬಾಳ ಅವರ ಪುತ್ರಿ, ಬಹುಮುಖ ಪ್ರತಿಭೆ ಕು. ಸಾಹಿತ್ಯ ಎಂ. ಗೊಂಡಬಾಳ ಎಸ್.ಎಸ್.ಎಲ್.ಸಿಯಲ್ಲಿ ಶೇ. 93.92 ಅಂಕ ಪಡೆದು ಶಾಲೆಗೆ ದ್ವಿತಿಯ ಸ್ಥಾನದ ಮೂಲಕ ತೇರ್ಗಡೆಯಾಗಿದ್ದಾಳೆ.

ಭಾಗ್ಯನಗರದ ಪಯೋನಿಯರ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಕು. ಸಾಹಿತ್ಯ ಎಂ. ಗೊಂಡಬಾಳ ಸಂಗೀತ, ನೃತ್ಯ, ಚಿತ್ರಕಲೆ ಹಾಗೂ ವಿವಿಧ ಸಂಗೀತ ವಾದ್ಯಗಳಲ್ಲಿ ಪರಿಣತಿ ಹೊಂದಿದ್ದು, ಓದಿನಲ್ಲಿಯೂ ಸಹ ಉತ್ತಮ ಅಂಕಗಳನ್ನು ಪಡೆಯುವ ಮೂಲಕ ಹಲವು ಪ್ರತಿಷ್ಠಿತ ಕಾಲೇಜುಗಳಲ್ಲಿ ಉಚಿತ ಶಿಕ್ಷಣ ಪಡೆಯಲು ಭಾಜನಳಾಗಿದ್ದಾಳೆ.

# ವಿನಾಯಕ ಶಾಲೆಗೆ 94 ರಷ್ಟು ಅಂಕ



**ತೇರದಾಳ :** ಇಲ್ಲಿನ ಕಲ್ಮೇಶ್ವರ ವಿದ್ಯಾವರ್ಧಕ ಸಂಘದ ವಿನಾಯಕ ಪ್ರೌಢಶಾಲೆ 2023-24ನೇ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಫಲಿತಾಂಶ ಶೇಕಡಾ 94ರಷ್ಟು ಆಗಿದೆ.

ಶಾಲೆಯ ವಿದ್ಯಾರ್ಥಿನಿ ಮೇಘಾ ಶೇಖರ ಶೇಗುಣಸಿ 567(90.72) ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾಳೆ. ಅದರಂತೆ ಅಶ್ವಿನಿ ತಳವಾರ 562(89.92) ದ್ವಿತೀಯ ಹಾಗೂ ಮಹಾನಂದಾ ಹಾಲೊಳ್ಳಿ 510(81.06) ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾಳೆಂದು ಶಾಲಾ ಪ್ರಕಟಣೆ ತಿಳಿಸಿದೆ.

# ಮಹಾದೇವ ಕಳ್ಳಿಗುದ್ದಿ ನಿಧನ



**ರಬಕವಿ :** ಇಲ್ಲಿಯ ರಹವಾಸಿ ಮಹಾದೇವ ಕಳ್ಳಿಗುದ್ದಿ ಅವರು ತಮ್ಮ 63 ನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ಮೇ 9 ರಂದು ನಿಧನರಾದರು. ಅವರ ಅಂತ್ಯಕ್ರಿಯೆ ಮೇ 10 ರಂದು ಮುಂಜಾನೆ ರಬಕವಿಯಲ್ಲಿ ಜರುಗಲಿದೆ. ಮೃತರು ಸುಮಾರು ಹತ್ತು ವರ್ಷಗಳ ಕಾಲ ಬನಹಟ್ಟಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡಿ ಅಲ್ಲಿಂದ ಮ್ಯಾನೇಜರ್ ಹುದ್ದೆಗೆ ಬಡ್ತಿ ಪಡೆದು ಬೆಂಗಳೂರಿಗೆ ವರ್ಗಾವಣೆಯಾಗಿದ್ದರು. ಮೃತರು ತಮ್ಮ ಹಿಂದೆ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಸೋಲಿನ ಹತಾಷೆಯಿಂದ ಸಮಗ್ರ ದೇಶದ ನಾಗರಿಕ ಸಮುದಾಯದ ಅವಹೇಳನ ಶೋಭಿತವಲ್ಲ: ರಾಘವೇಂದ್ರ ಪಾಲನಕರ

**ಗದಗ :** ಆಡಳಿತಾರೂಢ ಕೇಂದ್ರೀಯ ಬಿಜೆಪಿ ಸರಕಾರವು ಕಳೆದ 10 ವರ್ಷಗಳಿಂದ ದೇಶದ ಸಮಸ್ತ ನಾಗರಿಕರ ಶ್ರೇಯೋಭಿವೃದ್ಧಿಯನ್ನು ಕೈಗೊಂಡು ಪ್ರತಿಯೊಬ್ಬ ನಾಗರಿಕರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಸೈಕ್ಷಣಿಕವಾಗಿ ನೈತಿಕವಾಗಿ ಮುಂಚುಣಿಯಲ್ಲಿ ತರುವುದರ ಮೂಲಕ ಪ್ರಪಂಚವೇ ನಿಬ್ಬೇರಗಾಗಿಸುವಂತೆ ವಿಶೇಷ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವದು ಎಂಬ ವಿಶ್ವಾಸಾರ್ಹ ಹೇಳಿಕೆಯೊಂದಿಗೆ ಕೇಂದ್ರದಲ್ಲಿ ಅಧಿಕಾರ ಚುಕ್ಕಾಣಿಯನ್ನಲಂಕರಿಸಿದ ಬಿಜೆಪಿ ಪಕ್ಷವು ದೇಶದ ನಾಗರಿಕರ ಆರ್ಥಿಕ ಪರಸ್ಥಿತಿಯು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ತಮ್ಮ ದೈನಂದಿನ ಉಪ ಜೀವನವನ್ನು ಸಾಗಿಸಲಾರದಂತಹ ದುಃಸ್ಥಿಯಲ್ಲಿದ್ದರೂ ಅವರ ಧಾರ್ಮಿಕ ಮನೋಭಾವನೆ, ಅನ್ಯ ಪಂಗಡದವರನ್ನು ಎತ್ತಿಕಟ್ಟುವ ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವುದರ ಮೂಲಕ ದೇಶದ ನಾಗರಿಕರನ್ನು ಭಯದ ವಾತಾವರಣದಲ್ಲಿ ಜೀವಿಸುವಂತಹ ಪರಸ್ಥಿತಿಯನಂಟು ಮಾಡಿರುವದು ವಿಷಾದನೀಯ ಸಂಗತಿಯಾಗಿರುತ್ತದೆ ಎಂದು ವಕೀಲರು ಹಾಗೂ ಸಾಮಾಜಿಕ ಕಾರ್ಯಕರ್ತರಾದ ರಾಘವೇಂದ್ರ ಪಾಲನಕರ ದೇಶದ ನಾಗರಿಕರ ಕಳವಳವನ್ನು ವ್ಯಕ್ತಪಡಿಸಿರುತ್ತಾರೆ.

ಇದಕ್ಕೆಲ್ಲಾ ಪುಷ್ಠಿಕರಣವೆಂಬಂತೆ ಕೇಂದ್ರದಲ್ಲಿ ಪ್ರತಿಪಕ್ಷವು ಅಧಿಕಾರಕ್ಕೆ ಬಂದರೆ ದೇಶದ ಸಂಪತ್ತನ್ನು ಮುಸ್ಲಿಮರಿಗೆ ಮರು ಹಂಚಿಕೆ ಮಾಡುತ್ತದೆ ಎಂಬ ಹೇಳಿಕೆ, ಪ್ರತಿಪಕ್ಷಗಳಿಗೆ ಅಕ್ರಮವಾಗಿ ದೇಶ ಪ್ರವೇಶಿಸಿದ ಮುಸ್ಲಿಮರೇ ಹೆಚ್ಚು ಮುಖ್ಯ , ಜನರು ಕಷ್ಟಪಟ್ಟು ಸಂಪಾದಿಸಿದ ಹಣ ಮತ್ತು ಬೆಲೆಬಾಳುವ ವಸ್ತುಗಳನ್ನು "ನುಸುಳುಕೋರರು" ಮತ್ತು "ಹೆಚ್ಚು ಮಕ್ಕಳನ್ನು ಹೊಂದಿರುವವರಿಗೆ" ನೀಡಲು ಪ್ರತಿಪಕ್ಷಗಳು ಯೋಚಿಸುತ್ತಿವೆ, ಭಾರತೀಯ ಕ್ರಿಕೆಟ್ ಟೀಮ್ ನಲ್ಲಿ ಹೆಚ್ಚಾನು ಹೇಚ್ಚು ಅಲ್ಪಸಂಖ್ಯಾತರರನ್ನು ಹೊಂದುತ್ತದೆ, ದೇಶದ ವೈಯಕ್ತಿಕ ಆಸ್ತಿಗಳನ್ನು ಕಸಿದು ಅದನ್ನು ಮುಸ್ಲಿಮರಿಗೆ ಪ್ರತಿಪಕ್ಷ ಹಂಚುತ್ತದೆ. ಇದು ನಗರ ನಕ್ಸಲ್ ಯೋಜನೆಯಾಗಿದೆ. ಈ ನಗರ ನಕ್ಸಲ್ ಮನಸ್ಥಿತಿಯಿಂದ ತಾಯಂದಿರೆ, ಸಹೋದರಿಯರೇ ಅವರು ನೀಮ್ಮ ಮಂಗಲಸೂತ್ರವನ್ನು ಸಹ ಬಿಡುವುದಿಲ್ಲ

ಎಂಬೆಲ್ಲಾ ಭಾವನಾತ್ಮಕ ಮತ್ತು ಧಾರ್ಮಿಕ ಪ್ರಚೋದನಕಾರಿ ಹೇಳಿಕೆಗಳು ಚುನಾವಣಾ ದುರ್ಲಾಭಕ್ಕಾಗಿ ಕೋಮು ಧ್ರುವೀಕರಣ ಮಾಡಲು ಪ್ರಯತ್ನಿಸುತ್ತಿರುವದು ದೇಶದ ಸರ್ವತೋಮುಖ ಶ್ರೇಯೋಭಿವೃದ್ಧಿಗೆ ಮಾರಕವಾರುತ್ತದೆ ಎಂದು ವಕೀಲರು ಹಾಗೂ ಸಾಮಾಜಿಕ ಕಾರ್ಯಕರ್ತರಾದ ರಾಘವೇಂದ್ರ ಪಾಲನಕರ ಪ್ರಕಟಣೆಯ ಮೂಲಕ ಸಮಸ್ತ ನಾಗರಿಕರ ಮನಃ ಮಿಡಿತವನ್ನು ವ್ಯಕ್ತಪಡಿಸಿರುತ್ತಾರೆ.

# ಬೈಲಹೊಂಗಲ: ಒಣಮೇವು ಸಾಗಿಸುತ್ತಿದ್ದ ಟ್ರ್ಯಾಕ್ಟರ್‌ಗಳಿಗೆ ಬೆಂಕಿ



**ಬೈಲಹೊಂಗಲ :** ತಾಲ್ಲೂಕಿನ ಹಿಟ್ಟಣಗಿ ಗ್ರಾಮದಿಂದ ಮೇವು ಹೊತ್ತುಕೊಂಡು ಇಂಚಲ ರಸ್ತೆ ಮಾರ್ಗವಾಗಿ ರಾಯಬಾಗ ಕಡೆ ಗೋವಿನಜೋಳದ ಒಣಮೇವು ಸಾಗಿಸುತ್ತಿದ್ದ ಮೂರು ಟ್ರ್ಯಾಕ್ಟರ್‌ಗಳಿಗೆ ಆಕಸ್ಮಿಕವಾಗಿ ವಿದ್ಯುತ್ ತಂತಿ ತಗುಲಿದ ಪರಿಣಾಮ ಲಕ್ಷಾಂತರ ಮೌಲ್ಯದ ಒಣಮೇವು ಸುಟ್ಟು ಕರಕಲಾದ ಘಟನೆ ಇಂಚಲ ರಸ್ತೆಯ ಹತ್ತಿರ ಬುಧವಾರ ಘಟನೆ ಸಂಭವಿಸಿದೆ.

ಸುದ್ದಿ ತಿಳಿದು ತಕ್ಷಣ ಅಗ್ನಿಶಾಮಕ ಠಾಣಾಧಿಕಾರಿ ತಿಪ್ಪಣ್ಣಾ ನಾವದಗಿ ನೇತೃತ್ವದ ಸಿಬ್ಬಂದಿ ಘಟನಾ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಲು 3 ಗಂಟೆಗಳ ಕಾಲ ಹರಸಾಹಸ ಪಟ್ಟರು. ಮೇವಿಗೆ ಬೆಂಕಿ ತಗುಲಿದ್ದರಿಂದ ಸಂಕಷ್ಟದಲ್ಲಿರುವ ರೈತನ ಬದುಕಿನ ಮೇಲೆ ಗಾಯದ ಬರೆ ಎಳೆದಂತಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State